28ರಂದು ವಿಶ್ವಸಂಸ್ಥೆಯ ಸಾಮಾನ್ಯಸಭೆಯಲ್ಲಿ ಅಂಗೀಕಾರವಾಯಿತು. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಅದರ ಎಲ್ಲ ಮೂಲಭೂತ ಅಂಶಗಳನ್ನು ಯಥಾಸ್ಥಿತಿಯಲ್ಲಿ ಉಳಿಸಬೇಕು ಎಂದು ಈ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಎಲ್ಲ ಆರ್ಥಿಕ ಯೋಜನೆಗಳ ಪ್ರಮುಖ ಅಂಶ ಪರಿಸರ ಸಂರಕ್ಷಣೆ ಆಗಿರಬೇಕು ಎಂದು ಸೂಚಿಸಲಾಯಿರು. ಪರಿಸರ ಸಮಸ್ಯೆಗಳನ್ನು ಬೆಳಕಿಗೆ ತರಲು ಮತ್ತು ಪರಿಸರ ನೀತಿಯ ಬಗ್ಗೆ ಶಿಫಾರಸ್ಸು ಮಾಡುವ ಉದ್ದೇಶದಿಂದ 1983ರಲ್ಲಿ ರಾಷ್ಟ್ರೀಯ ಪರಿಸರ ಸಲಹಾ ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿ ದೇಶಾದ್ಯಂತ ಪರಿಸರದ ಮಹತ್ವವನ್ನು ಪ್ರತಿಪಾದಿಸುವ ಚರ್ಚಾವೇದಿಕೆಗಳನ್ನು ಕೂಡಾ ಸಂಘಟಿಸಿತು. 1992ರಲ್ಲಿ ಕೇಂದ್ರ ಸರ್ಕಾರ ಪ್ರತಿ ವರ್ಷ ಪರಿಸರ ಪರಿಶೋಧನೆಯನ್ನೂ ಕಡ್ಡಾಯಗೊಳಿಸಿತು. ಇದರ ಅನ್ವಯ ಪ್ರತಿ ಕೈಗಾರಿಕೆಗಳು 1993ನೇ ಹಣಕಾಸು ವರ್ಷದಿಂದ ಕಡ್ಡಾಯವಾಗಿ ಪರಿಸರ ಪರಿಶೋಧನಾ ವರದಿಗಳನ್ನು ಸಲ್ಲಿಸಬೇಕು.

ನಗರಗಳಲ್ಲಿ ಮಾಲಿನ್ಯ ನಿಯಂತ್ರಿಸುವಲ್ಲಿ ಮತ್ತು ಅರಣ್ಯ ಸಂರಕ್ಷಣೆಯ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಮಹತ್ವದ ಪಾತ್ರವನ್ನು ವಹಿಸಿದೆ. ಹಲವು ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್ ನೀಡಿದ ಮಹತ್ವದ ತೀರ್ಪಿನಿಂದಾಗಿ, ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಳ್ಳಬೇಕಾಯಿತು. ದೇಶದ ಪ್ರಮುಖ ನಗರ ಹಾಗೂ ಮಹಾನಗರಗಳಲ್ಲಿ ವಾಹನಗಳು ಉಗುಳುವ ಹೊಗೆಯಿಂದಾಗಿ ಪರಿಸರ ಮಾಲಿನ್ಯ ಉಂಟಾಗುತ್ತಿರುವುದನ್ನು ಮನಗಂಡ ಸುಪ್ರೀಂಕೋರ್ಟ್, ಈ ನಿಟ್ಟಿನಲ್ಲೂ ಸರ್ಕಾರಕ್ಕೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಿ, ವಾಹನಗಳ ಹೊಗೆ ತಪಾಸಣೆಯನ್ನು ಕಡ್ಡಾಯಗೊಳಿಸುವಂತೆ ಮಾಡಿದೆ. ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ತಂತ್ರಜ್ಞಾನವನ್ನು ಸಾಧ್ಯವಾದಷ್ಟೂ ಹೆಚ್ಚಿನ ಪ್ರಮಾಣದಲ್ಲಿ ಅಳವಡಿಸಿಕೊಳ್ಳುವಂತೆ ಮತ್ತು ಮಹಾನಗರಗಳಲ್ಲಿ ಬಸ್ಸು ಮತ್ತು ಆಟೋಗಳಿಗೆ ಸಿಎಜ್‌ಜಿ ಇಂಧನ ಬಳಸುವಂತೆಯೂ ಸುಪ್ರೀಂಕೋರ್ಟ್ ಸೂಚನೆ ನೀಡಿದೆ. ಈ ಹಲವಾರು ಕ್ರಮಗಳ ಮೂಲಕ ನಗರಗಳ ಮಾಲಿನ್ಯ ಪ್ರಮಾಣವನ್ನು ಕಡಿಮೆ ಮಾಡಲು ಸುಪ್ರೀಂಕೋರ್ಟ್ ನೆರವಾಗಿದೆ. ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರದ ಜಲಜನಕ ಇಂಧನ ಬಳಸುವ ವಾಹನಗಳ ಅಭಿವೃದ್ಧಿ ಸಂಶೋಧನೆಗಳಿಗೆ ಸರ್ಕಾರ ಹಸಿರು ನಿಶಾನೆ ತೋರಿರುವುದು ಕೂಡಾ ಈ ನಿಟ್ಟಿನಲ್ಲಿ ಸ್ವಾಗತಾರ್ಹ ಬೆಳವಣಿಗೆ. 2003ರಲ್ಲಿ ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಿ, ಭಾರತದಲ್ಲಿ ಜಲಜನಕವನ್ನು ಪರ್ಯಾಯ ಇಂಧನವಾಗಿ ಬಳಸುವ ಕುರಿತು ನೀಲನಕ್ಷೆ ಸಿದ್ಧಪಡಿಸುವಂತೆ ಆದೇಶ ನಿಡಿದೆ. ಅಮೂಲ್ಯ ನೈಸರ್ಗಿಕ ಹಾಗೂ ಸ್ವಾಭಾವಿಕ ವಾತಾವರಣವನ್ನು ಕಾಪಾಡಿಕೊಂಡು ಬರುವ ನಿಟ್ಟಿನಲ್ಲಿ ಹೊಗೆರಹಿತ ತಂತ್ರಜ್ಞಾನಕ್ಕೆ ಭಾರತದಲ್ಲಿ ಹೆಚ್ಚು ಒತ್ತು ನೀಡಲಾಗುತ್ತಿದೆ. ದೇಶದಲ್ಲಿ ಹಸಿರು ತೆರಿಗೆ ಅಥವಾ ಇಂಗಾಲ ತೆರಿಗೆ ವಿಧಿಸುವಂಥ ಕ್ರಮದಿಂದ ಇದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಿದೆ. ಪರಿಸರ ಸ್ನೇಹಿಯಲ್ಲದ ವಾಹನಗಳ ಮೇಲೆ ಅಧಿಕ ತೆರಿಗೆ ವಿಧಿಸುವುದು, ಅರಣ್ಯೀಕರಣ ಆಂದೋಲನವನ್ನು ಹಮ್ಮಿಕೊಳ್ಳುವುದು, ಪರಿಸರ ಸಂಶೋಧನೆ ಮತ್ತು ಪರ್ಯಾಯ ಇಂಧನ ಕ್ಷೇತ್ರದ ಸಂಶೋಧನೆಗಳಿಗೆ ಒತ್ತು ನೀಡುವ ಮೂಲಕ ಪರಿಸರ ಮಾಲಿನ್ಯವನ್ನು ನಿಯಂತ್ರಣಕ್ಕೆ ತರಲು ಅವಕಾಶವಿದೆ.

ಪರಿಸರ ಸಂರಕ್ಷಣೆಗೆ ಸರ್ಕಾರ ಗಂಭೀರ ಹಾಗೂ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ, ನಮ್ಮ ಸಲುವಾಗಿ ಮತ್ತು ಮುಂದಿನ ಪೀಳಿಗೆಯ ಸಲುವಾಗಿ ಪರಿಸರದ ಶುದ್ಧತೆಯನ್ನು ಕಾಪಾಡುವ ಹೊಣೆ ಎಲ್ಲ ಕೈಗಾರಿಕೋದ್ಯಮಿಗಳ ಮೇಲೆ ಮತ್ತು ಎಲ್ಲ ನಾಗರಿಕರ ಮೇಲೆ ಇದೆ. ನಮ್ಮ ಬದುಕಿನ ತೀರಾ ಮೂಲಭೂತ ಅಗತ್ಯತೆ ಎನಿಸಿದ ಆಮ್ಲಜನಕವನ್ನು ನಾವು ಪಡೆಯುವುದೇ ವಾತಾವರಣದಿಂದ. ನಮ್ಮ ಜೀವಜಲ ಎನಿಸಿದ ನೀರಿನಲ್ಲೇ ನಮ್ಮ ಅಸ್ತಿತ್ವ ಅಡಗಿದೆ. ಇವನ್ನೇ ನಾವು ಕಲುಷಿತಗೊಳಿಸಿದರೆ, ಅದು ನಾವು ಆತ್ಮಹತ್ಯೆ ಮಾಡಿಕೊಂಡಂತಾಗುತ್ತದೆ. ಮುಂದಿನ ಪೀಳಿಗೆಗೆ ನಾವು ನೀಡಬಹುದಾದ ಅತಿದೊಡ್ಡ ಕೊಡುಗೆ ಎಂದರೆ ಮಾಲಿನ್ಯಮುಕ್ತ ಪರಿಸರ.

### 26. ಮೀಸಲಾತಿ ನೀತಿ

ಭಾರತಕ್ಕೆ ವಿಸ್ತೃತ ತಳಹದಿಯ, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಬುನಾದಿ ಹಾಕಬೇಕಾದರೆ, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ತರಬೇಕು. ಸಾಮಾಜಿಕ ಶೋಷಣೆಗಳನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಪದ್ಧತಿಗಳನ್ನು ಆಮೂಲಾಗ್ರವಾಗಿ ಬದಲಿಸಬೇಕು. ಭಾರತದ 7.5 ಲಕ್ಷ ಹಳ್ಳಿಗಳಲ್ಲಿ ವಾಸವಾಗಿರುವ ಗ್ರಾಮೀಣ ಜನತೆ ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುವ ರೂವಾರಿಗಳಾಗಬೇಕು. ಮಹಿಳೆಯರಿಗೆ ಎಲ್ಲ ಗೌರವಗಳನ್ನು ನೀಡುವ ಜತೆಗೆ ಅವರಿಗೆ ಸಮಾನ ಅವಕಾಶ ಕಲ್ಪಿಸಿಕೊಡುವ ಮೂಲಕ ಅಭಿವೃದ್ಧಿಯಲ್ಲಿ ಅವರೂ ಸಮಾನ ಪಾಲು ಪಡೆಯಲು ಅವಕಾಶ ಮಾಡಿಕೊಡಬೇಕು.

ಆರ್ಯನ್ನರ ಕಾಲದಲ್ಲಿ, ಭಾರತದಲ್ಲಿ ವಿಶಿಷ್ಟವಾದ ಪಂಚಾಯತ್ ಪದ್ಧತಿ ಜಾರಿಯಲ್ಲಿತ್ತು. ಇದು ಅತ್ಯಂತ ಪ್ರಬಲ ಹಾಗೂ ಬಹುತೇಕ ಸ್ವತಂತ್ರ ಸಂಸ್ಥೆಯಾಗಿತ್ತು. ಸ್ವಾತಂತ್ರ್ಯಾ ನಂತರ ಈ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಮನರುಜ್ಜೀವನಗೊಳಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆದವು. ಗ್ರಾಮೀಣ ಜನತೆ ತಾವು ಬೆಳೆಯುವ ಜತೆಗೆ ಇಡೀ ದೇಶದ ಬೆಳವಣಿಗೆಗೂ ಕೊಡುಗೆ ನೀಡುವಂತಾಗಲು ಪಂಚಾಯತ್‌ರಾಜ್ ಸಂಸ್ಥೆಗಳೇ ಸೂಕ್ತ ಎಂಬ ನಿರ್ಧಾರಕ್ಕೆ ಅಂದಿನ ಮುಖಂಡರು ಬಂದಿದ್ದರು. ಗಾಂಧೀಜಿಯವರ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ದೇಶದ ಅಭಿವೃದ್ಧಿ ಎಂದರೆ ಪ್ರತಿ ಹಳ್ಳಿಗಳ ಅಭಿವೃದ್ಧಿ. ಪ್ರತಿ ಹಳ್ಳಿಗಳು ಕೂಡಾ ಸ್ವಾವಲಂಬನೆ ಸಾಧಿಸಿಕೊಂಡು ತಮ್ಮ ವ್ಯವಹಾರಗಳನ್ನು ತಾವೇ ನಿರ್ವಹಿಸಿಕೊಳ್ಳಲು ಸಮರ್ಥರಾಗಬೇಕು ಎಂದು ಗಾಂಧೀಜಿ ಪ್ರತಿಪಾದಿಸಿದ್ದರು. ಅವರ ಪ್ರಕಾರ ಗ್ರಾಮಪಂಚಾಯ್ತಿಗಳಿಗೆ ನ್ಯಾಯ ತೀರ್ಮಾನದ ಅಧಿಕಾರವನ್ನು ಕೂಡಾ ನೀಡಬೇಕು ಎನ್ನುವುದಾಗಿತ್ತು. ಬಡ ಹಳ್ಳಿ ಮಂದಿ ಕೋರ್ಟ್‌ಗಳಿಗೆ ಅಲೆದು ತಮ್ಮ ಹಣ ಮತ್ತು ಶ್ರಮ ವ್ಯರ್ಥ ಮಾಡಿಕೊಳ್ಳುವಂತಾಗಬಾರದು. ಅವರ ಮನೆಬಾಗಿಲಲ್ಲೇ ನ್ಯಾಯದಾನ ದೊರಕುವಂತಾಗಲು ಪಂಚಾಯ್ತಿಗಳಿಗೆ ಈ ಅಧಿಕಾರ ನೀಡಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದರು.

"ಭಾರತ ಬಡವಾಗಿರುವುದು ಇಲ್ಲಿನ ಹಳ್ಳಿಗಳು ಬಡವಾಗಿರುವ ಕಾರಣದಿಂದ. ಭಾರತ ಶ್ರೀಮಂತವಾಗಬೇಕಾದರೆ ದೇಶದ ಹಳ್ಳಿಗಳು ಶ್ರೀಮಂತವಾಗಬೇಕು. ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು. ಗ್ರಾಮೀಣ ಜನತೆಗೆ ಸ್ವರಾಜ್ಯದ ಅನುಕೂಲತೆಗಳ ಬಗ್ಗೆ ಅರಿವು ಮೂಡಿಸಬೇಕು. ಅವರ ಹಳ್ಳಿಗಳಲ್ಲೇ ಅವರು ಪ್ರತಿಯೊಂದನ್ನೂ ಪಡೆಯುವಂತಾಗಬೇಕು" ಎಂದು ಹೇಳಿದ್ದರು.



www.shikarat.com

ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ ಕೂಡಾ ಪಂಚಾಯತ್‌ರಾಜ್ ವ್ಯವಸ್ಥೆಯ ಮಹತ್ವವನ್ನು ಮನಗಂಡಿದ್ದರು. ನಮ್ಮ ಸಂವಿಧಾನದ 40ನೇ ವಿಧಿಯ ಪ್ರಕಾರ, (ರಾಜ್ಯ ನಿರ್ದೇಶನ ತತ್ವಗಳ ಅನ್ವಯ) "ಸರ್ಕಾರ ಗ್ರಾಮಪಂಚಾಯತ್‌ಗಳನ್ನು ಸಂಘಟಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈ ಪಂಚಾಯತ್‌ಗಳು ಸ್ವಯಂ ಸರ್ಕಾರಗಳಾಗುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವಂತಾಗಬೇಕು. ದೇಶದ ಇತಿಹಾಸದಲ್ಲಿ 1993ರ ಏಪ್ರಿಲ್ 24ರಂದು ದೇಶದ ಸಂವಿಧಾನಕ್ಕೆ ತಿದ್ದುಪಡಿ ತಂದು, ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ಕಲ್ಪಿಸಿದೆ.

ಈ ಸಂವಿಧಾನ ತಿದ್ದುಪಡಿ ಕಾಯ್ದೆಯ ಪ್ರಮುಖ ಅಂಶಗಳೆಂದರೆ:

- ಎಲ್ಲ ರಾಜ್ಯಗಳಲ್ಲಿ ಮೂರು ಸ್ತರಗಳ ಪಂಚಾಯತ್‌ರಾಜ್ ವ್ಯವಸ್ಥೆಗಳನ್ನು ಜಾರಿಗೆ ತರಬೇಕು.
- ಐದು ವರ್ಷಗಳಿಗೊಮ್ಮೆ ಈ ಸಂಸ್ಥೆಗಳಿಗೆ ಕಡ್ಡಾಯವಾಗಿ ಚುನಾವಣೆ ನಡೆಸಬೇಕು.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಪಂಚಾಯ್ತಿ ಸ್ಥಾನಗಳಲ್ಲಿ ಕನಿಷ್ಠ ಶೇಕಡ 33.3ರಷ್ಟು ಮೀಸಲಾತಿ ಒದಗಿಸಬೇಕು.
- ಪಂಚಾಯತ್‌ಗಳಿಗೆ ಹಣಕಾಸು ಅಧಿಕಾರ ಮತ್ತು ಸಂಪನ್ಮೂಲ ಹಂಚಿಕೆಯನ್ನು ಶಿಫಾರಸ್ಸು ಮಾಡಲು ರಾಜ್ಯ ಹಣಕಾಸು ಆಯೋಗಗಳನ್ನು ನೇಮಕ ಮಾಡಬೇಕು.
- ಇಡೀ ಜಿಲ್ಲೆಗೆ ಸಮಗ್ರ ಅಭಿವೃದ್ಧಿ ಯೋಜನೆಯ ಕರಡು ಸಿದ್ಧಪಡಿಸಲು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಬೇಕು.

**ಅಧಿಕಾರ ಮತ್ತು ಜವಾಬ್ದಾರಿ**

- ಸಂವಿಧಾನದ ಪ್ರಕಾರ, ಪಂಚಾಯತ್‌ಗಳಿಗೆ ಸ್ವತಂತ್ರ್ಯ ಪ್ರಾಧಿಕಾರಗಳಾಗಿ ಕಾರ್ಯ ನಿರ್ವಹಿಸುವ ಅಧಿಕಾರವನ್ನು ನೀಡಬೇಕು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಆಯಾ ಹಂತಕ್ಕೆ ಅನುಗುಣವಾಗಿ ಅಧಿಕಾರಗಳನ್ನು ನೀಡಬೇಕು.
- ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಯೋಜನೆಗಳನ್ನು ಸಿದ್ಧಪಡಿಸುವುದು.
- ಸಂವಿಧಾನದ ಶೆಡ್ಯೂಲ್ 11ರಲ್ಲಿ ನಮೂದಿಸಿದ 29 ವಿಷಯಗಳಿಗೆ ಸಂಬಂಧಪಟ್ಟಂತೆ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕೆ ಅನುಗುಣವಾದ ಯೋಜನೆಗಳನ್ನು ಜಾರಿಗೊಳಿಸುವುದು.
- ಎಲ್ಲ ಬಗೆಯ ತೆರಿಗೆ, ಸುಂಕ ಮತ್ತು ಶುಲ್ಕಗಳನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.

ಪಂಚಾಯತ್‌ರಾಜ್ ವ್ಯವಸ್ಥೆಯನ್ನು ವಿವಿಧ ರಾಜ್ಯಗಳಲ್ಲಿ ಅವಲೋಕಿಸಿದರೆ, ಯಶಸ್ಸು ಮತ್ತು ವೈಫಲ್ಯದ ಮಿಶ್ರಣ ಇರುವುದನ್ನು ನಾವು ಕಾಣಬಹುದು. 1959 ರಿಂದ 1964ರವರೆಗೆ ಅಭೂತಪೂರ್ವ ಯಶಸ್ಸು ಕಂಡಿತು. 1965 ರಿಂದ 1969ರ ಅವಧಿಯಲ್ಲಿ ಸ್ಥಗಿತಗೊಂಡಿತ್ತು. 1969ರಿಂದ 1977ರ ಅವಧಿಯಲ್ಲಿ ಇದು ವಿಫಲವಾಯಿತು.

ಮಸೂದೆಯ ಇನ್ನೊಂದು ಪ್ರಮುಖ ಅಂಶವೆಂದರೆ, ಅದು ಗ್ರಾಮಸಭೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ಕಲ್ಪಿಸಿದೆ. ಸಂವಿಧಾನದ 234 (ಬಿ) ವಿಧಿಯ ಅನ್ವಯ, ಗ್ರಾಮಸಭೆಯು ಆ ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ನೊಂದಾಯಿಸಲ್ಪಟ್ಟ ಎಲ್ಲ ಮತದಾರರನ್ನು ಒಳಗೊಂಡಿರುತ್ತದೆ. ಸಂವಿಧಾನದ 234 (ಎ) ವಿಧಿಯ ಅನ್ವಯ, ಗ್ರಾಮಸಭೆಯು ತನ್ನ ಅಧಿಕಾರವನ್ನು ಬಳಸಿಕೊಂಡು, ಕಾನೂನಾತ್ಮಕವಾಗಿ ರಾಜ್ಯ ವಿಧಾನಸಭೆ ನಿರ್ವಹಿಸುವ ಎಲ್ಲ ಕಾರ್ಯಗಳನ್ನು ನಿರ್ವಹಿಸಬಹುದಾಗಿದೆ. ಈ ಮೂಲಕ 18 ವರ್ಷ ತುಂಬಿದ ಪ್ರತಿಯೊಬ್ಬರೂ ತಮ್ಮ ಗ್ರಾಮಕ್ಕೆ ಏನು ಬೇಕು ಏನು ಬೇಡ ಎನ್ನುವುದನ್ನು ನಿರ್ವಹಿಸುವ ಅಧಿಕಾರವನ್ನು ಹೊಂದಿರುತ್ತಾನೆ. ಗ್ರಾಮದ ತೀರಾ ಬಡ ವ್ಯಕ್ತಿ ಸೇರಿದಂತೆ ಪ್ರತಿಯೊಬ್ಬರಿಗೂ ವೇದಿಕೆಯನ್ನು ಗ್ರಾಮಸಭೆ ಕಲ್ಪಿಸುತ್ತದೆ.

ಗ್ರಾಮಪಂಚಾಯ್ತಿ ನಿರ್ವಹಿಸುವ ಪ್ರತಿಯೊಂದು ಕಾರ್ಯಯೋಜನೆಗಳು ಸಂಪೂರ್ಣ ಪಾರದರ್ಶಕವಾಗಿ ಆಗುವ ನಿಟ್ಟಿನಲ್ಲಿ ಗ್ರಾಮಸಭೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಗ್ರಾಮದ ಎಲ್ಲ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ತಲುಪುವಂತೆ ಮಾಡುವಲ್ಲಿ, ಸಮುದಾಯ ಆಸ್ತಿಗಳ ಸೃಷ್ಟಿಯಲ್ಲಿ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಾಮಾಜಿಕ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವಲ್ಲಿ ಇದು ಮಹತ್ವದ ಪಾತ್ರ ವಹಿಸುತ್ತದೆ.

1996ರ ಡಿಸೆಂಬರ್ 24ರಂದು, ಪಂಚಾಯತ್ ಜಾಲವನ್ನು ಬುಡಕಟ್ಟು ಜನಾಂಗಗಳು ವಾಸಿಸುವ ಪ್ರತಿಯೊಂದು ಪ್ರದೇಶಗಳಿಗೂ ವಿಸ್ತರಿಸಲಾಯಿತು. ಪಂಚಾಯತ್ (104 ಶೆಡ್ಯೂಲ್ಡ್ ಪ್ರದೇಶಗಳಿಗೆ ವಿಸ್ತರಣೆ) ಕಾಯ್ದೆ–1996ರ ಅನ್ವಯ ಆಂಧ್ರಪ್ರದೇಶ, ಛತ್ತೀಸ್‌ಗಢ, ಗುಜರಾತ್, ಹಿಮಾಚಲಪ್ರದೇಶ, ಜಾರ್ಖಂಡ್, ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ ಮತ್ತು ರಾಜಸ್ಥಾನದ ಬುಡಕಟ್ಟು ಜನಾಂಗಗಳ ಪ್ರದೇಶಗಳಿಗೆ ವಿಸ್ತರಿಸಲಾಯಿತು. ಆ ರಾಜ್ಯಗಳ ಪಂಚಾಯತ್‌ರಾಜ್ ಖಾತೆ ಸಚಿವರ ಸಮ್ಮೇಳನವನ್ನು 2001ರ ಜುಲೈ 11ರಂದು ನವದೆಹಲಿಯಲ್ಲಿ ಆಯೋಜಿಸಲಾಯಿತು. ಪಂಚಾಯ್ತಿಗಳು ಸ್ವಯಂಸರ್ಕಾರಗಳಾಗಿ ರೂಪಿಸುವ ನಿಟ್ಟಿನಲ್ಲಿ ಪಂಚಾಯ್ತಿಗಳಿಗೆ ಅಧಿಕಾರ ನೀಡಿದ




www.shikarat.com

ಬಗ್ಗೆ ಮತ್ತು ಈ ನಿಟ್ಟಿನಲ್ಲಿ ಪಂಚಾಯ್ತಿಗಳು ಸಾಧಿಸಿದ ಅಭಿವೃದ್ಧಿಯನ್ನು ವಿಶ್ಲೇಷಿಸಲಾಯಿತು. ಇದರ ಅನ್ವಯ ಪಂಚಾಯ್ತಿಗಳಿಗೆ ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಸುವುದು ಕಡ್ಡಾಯ. ಸಂವಿಧಾನದ 11ನೇ ಶೆಡ್ಯೂಲ್‌ನಲ್ಲಿ ಹೇಳಿರುವ 29 ವಿಷಯಗಳ ಬಗ್ಗೆ ಹಾಗೂ ಅಗತ್ಯ ಬಿದ್ದರೆ ಜಿಲ್ಲಾ ಮಟ್ಟದ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸುವುದಕ್ಕೂ ಅವಕಾಶ ನೀಡಲಾಗಿದೆ.

ಪಂಚಾಯ್ತಿಗಳು ಸಾಮಾನ್ಯವಾಗಿ 2–3 ವಾರ್ಡ್‌ಗಳನ್ನು ಹೊಂದಿದ್ದು, ಅಂದಾಜು 2400 ಜನಸಂಖ್ಯೆಯನ್ನು ಒಳಗೊಂಡಿರುತ್ತದೆ. ಇದರ ಜತೆಗೆ ತಾಲೂಕು/ ತಹಸೀಲ್ ಮಟ್ಟದಲ್ಲಿ 4526 ಪಂಚಾಯ್ತಿಸಮಿತಿಗಳು ಕಾರ್ಯ ನಿರ್ವಹಿಸುತ್ತವೆ. ಒಟ್ಟು 330 ಜಿಲ್ಲಾ ಪರಿಷತ್ತುಗಳು ದೇಶದ ಶೇಕಡ 76ರಷ್ಟು ಪ್ರದೇಶವನ್ನು ಒಳಗೊಳ್ಳುತ್ತವೆ. ಪ್ರತಿ ಜಿಲ್ಲಾಪಂಚಾಯ್ತಿಗಳಲ್ಲಿ ಅಂದಾಜು 13ರಿಂದ 14 ಪಂಚಾಯ್ತಿ ಸಮಿತಿಗಳನ್ನು ಮತ್ತು 660 ಗ್ರಾಮಪಂಚಾಯ್ತಿಗಳನ್ನು ಹೊಂದಿರುತ್ತವೆ. ಈ ಎಲ್ಲ ಘಟಕಗಳೂ ಸಕ್ರಿಯವಾದಲ್ಲಿ ಮತ್ತು ಗ್ರಾಮದ ಅಭಿವೃದ್ಧಿಗೆ ಅಗತ್ಯವಾದ ಯೋಜನೆಗಳನ್ನು ಪ್ರಾಮಾಣಿಕವಾಗಿ ರೂಪಿಸಿದಲ್ಲಿ, ಗ್ರಾಮಗಳು ಕ್ಷಿಪ್ರ ಪ್ರಗತಿ ಸಾಧಿಸುವಲ್ಲಿ ಯಾವ ಸಂಶಯವೂ ಇಲ್ಲ.

ಪಂಚಾಯತ್‌ರಾಜ್ ಸಂಸ್ಥೆಯು, ಅಭಿವೃದ್ಧಿಯ ಮಾದರಿ ಘಟಕಗಳಂತೆ ಕಾರ್ಯ ನಿರ್ವಹಿಸಬೇಕು. ಮತ್ತು ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಲಗೊಳಿಸಲ್ಲಿ ತಳಮಟ್ಟದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪಂಚಾಯತ್‌ರಾಜ್‌ನ ಯಶಸ್ಸು ಆ ಪ್ರದೇಶದ ಜನರ ಸಕ್ರಿಯ ಪಾಲ್ಗೊಳ್ಳುವಿಕೆಯಲ್ಲಿ ಅಡಗಿದೆ.

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಅನುಭವ ಹೆಚ್ಚಿರುವ ನಿದರ್ಶನಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿವೆ. ಹಲವಾರು ಕಡೆಗಳಲ್ಲಿ ಈ ಮೀಸಲಾತಿಯ ಪ್ರಯೋಜನ ಪಡೆದ ಮಹಿಳೆಯ ಗಂಡ ಹಾಗೂ ತಂದೆ ಅಧಿಕಾರ ಚಲಾಯಿಸುವ ನಿದರ್ಶನಗಳೂ ಇವೆ. ಆದರೆ ಇನ್ನು ಕೆಲವು ಕಡೆಗಳಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ್ದಾರೆ. ಹಲವು ಕಡೆಗಳಲ್ಲಿ ಗಂಡ ಅಥವಾ ತಂದೆಯ ಕೈಗೊಂಬೆಯಂತೆ ವರ್ತಿಸಿದ ಪರಿಣಾಮವಾಗಿ ವಾಸ್ತವವಾಗಿ ಆಗಬೇಕಾದ ಮಹಿಳೆಯರ ಸಬಲೀಕರಣ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ.

ಹಲವಾರು ರಾಜ್ಯಗಳಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಸೂಕ್ತ ತರಬೇತಿ ನೀಡುವ ಪ್ರಯತ್ನವೂ ನಡೆದಿದೆ. ಹಲವಾರು ಕಡೆಗಳಲ್ಲಿ ರಾಜ್ಯ ಸರ್ಕಾರಗಳು ಇಂಥ ತರಬೇತಿಯನ್ನು ವ್ಯವಸ್ಥೆಗೊಳಿಸುತ್ತಿವೆ. ಕರ್ನಾಟಕದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ತನ್ನ ಗ್ರಾಮಸ್ಥ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಇಂಥ ಯಶಸ್ಸು ಸಾಧಿಸಿದ ಮಹಿಳೆಯರನ್ನೇ ಆಯ್ಕೆ ಮಾಡಿಕೊಂಡಿರುವುದು ವಿಶೇಷ. ಇದರಲ್ಲಿ ಎರಡು ವಿಭಾಗಗಳಿವೆ. ಮೊದಲ ಭಾಗದಲ್ಲಿ ಪರಸ್ಪರ ಸಂಭಾಷಣೆಯ ಅಂಶಗಳಿಗೆ ಒತ್ತು ನೀಡಲಾಗುತ್ತದೆ. ಇದರಲ್ಲಿ ಉಪಗ್ರಹ ಸಂಪರ್ಕ ಮೂಲಕ ಜಿಲ್ಲಾ ಕೇಂದ್ರಗಳು ಹಾಗೂ ರಾಜ್ಯ ರಾಜಧಾನಿಯ ನಡುವೆ ಸಂಪರ್ಕ ಕಲ್ಪಿಸಲಾಗುತ್ತದೆ. ಗ್ರಾಮಪಂಚಾಯ್ತಿಗಳಿಗೆ ಆಯ್ಕೆಯಾದ ಮಹಿಳೆಯರಿಗೆ ಪರಿಣಾಮಕಾರಿ ಮಾಧ್ಯಮವಾಗುತ್ತದೆ. ಇದರ ಪರಿಣಾಮಗಳು ಕೂಡಾ ತಕ್ಷಣ ಕಂಡುಬರುತ್ತದೆ. ದೊಡ್ಡ ಸವಾಲುಗಳನ್ನು ಎದುರಿಸುವ ಸಾಮರ್ಥ್ಯದ ಬಗ್ಗೆ ಮಹಿಳೆಯರಲ್ಲಿ ಆತ್ಮಸ್ಥೈರ್ಯ ತುಂಬುವಲ್ಲಿ ಕೂಡಾ ಇದು ಮಹತ್ವದ್ದಾಗಿದೆ.

ಈ ಕಾರ್ಯಕ್ರಮದ ಅನ್ವಯ ಮಹಿಳೆಯರು ರಾಜ್ಯದ ಶಾಸನಬದ್ಧ ಆಡಳಿತ ಕೇಂದ್ರವಾದ ವಿಧಾನಸಭೆಗೆ ಭೇಟಿ ನೀಡುವ ಅವಕಾಶವನ್ನೂ ಕಲ್ಪಿಸಲಾಗಿದೆ. ಇವರನ್ನು ವಿಧಾನ ಪರಿಷತ್‌ನಲ್ಲೂ ತರಬೇತಿಗೊಳಿಸಲಾಗುತ್ತದೆ. ಸ್ಪೀಕರ್ ಎಲ್ಲಿ ಕೂರುತ್ತಾರೆ; ಯಾವ ಕಾರ್ಯವನ್ನು ನಿರ್ವಹಿಸುತ್ತಾರೆ ಎನ್ನುವುದನ್ನು ಪ್ರತ್ಯಕ್ಷವಾಗಿ ನೋಡುತ್ತಾರೆ. ಮುಖ್ಯಮಂತ್ರಿ ಹಾಗೂ ವಿರೋದಪಕ್ಷದ ಮುಖಂಡರು ಕಲಾಪದ ವೇಳೆ ಎಲ್ಲಿ ಕೂರುತ್ತಾರೆ, ಚರ್ಚೆ ಹೇಗೆ ನಡೆಯುತ್ತದೆ ಎನ್ನುವ ಪ್ರತ್ಯಕ್ಷ ಅನುಭವವನ್ನು ಪಡೆಯುವುದರಿಂದ ಅವರು ಇದನ್ನು ತಮ್ಮ ಸ್ಥಳೀಯ ಮಟ್ಟದಲ್ಲಿ ಜಾರಿಗೆ ತರಲು ಅನುಕೂಲವಾಗುತ್ತದೆ. ಇದರ ಪರಿಣಾಮ ಎಷ್ಟರಮಟ್ಟಿಗೆ ಆಗಿದೆ ಎಂದರೆ, ಪಂಚಾಯ್ತಿ ಸಭೆಗಳಲ್ಲಿ ಇಂಥ ಮಹಿಳಾ ಪ್ರತಿನಿಧಿಗಳು ಪುರುಷ ಸದಸ್ಯರ ಜತೆಗೆ ವಾಗ್ವಾದ, ಚರ್ಚೆ ನಡೆಸುವಾಗ, "ನಿಮಗೇನು ಗೊತ್ತು? ನೀವು ವಿಧಾನಸಭೆ ಕಲಾಪವನ್ನು ವೀಕ್ಷಿಸಿದ್ದೀರಾ? ನಾವು ನೋಡಿದ್ದೇವೆ" ಎಂದು ತಿರುಗೇಟು ನೀಡುವ ಮಟ್ಟಕ್ಕೆ ಸಬಲರಾಗಿದ್ದಾರೆ.

ಈ ತರಬೇತಿಯ ಎರಡನೇ ಹಂತವೆಂದರೆ, ಮೊದಲ ಹಂತದ ತರಬೇತಿಯ ವಿಸ್ತೃತ ರೂಪ. ಇದರಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಪೌಷ್ಟಿಕಾಂಶ, ನೀರು, ಪ್ರಾಥಮಿಕ ಶಿಕ್ಷಣ, ಮೂಲಭೂತ ಆರೋಗ್ಯಸೇವೆ, ಲಸಿಕೆ ಹಾಕಿಸುವುದು, ಸಾಮಾನ್ಯ ಆಸ್ತಿ ಮತ್ತು ಸಂಪನ್ಮೂಲ ಮತ್ತಿತರ ವಿಷಯಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಇಂಥ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ವ್ಯವಸ್ಥೆಗೊಳಿಸಲಾಗುತ್ತದೆ. ಇದರ ಪ್ರಮುಖ ಗುರಿ ಕೂಡಾ ಎರಡು ಹಂತದ್ದು. ಸಮಸ್ಯೆಗಳ ಬಗ್ಗೆ ಅವರ ಮನಸ್ಸಿನಲ್ಲಿ ಪ್ರಶ್ನೆಗಳನ್ನು ಮೂಡಿಸುವಂಥದ್ದು ಒಂದು ಹಾಗೂ ಪಂಚಾಯ್ತಿಗಳಲ್ಲಿ ಅವರು ವಹಿಸಬೇಕಾದ ಪಾತ್ರದ ಬಗ್ಗೆ ಅವರಿಗೆ ಮೂಲಭೂತ ಮಾಹಿತಿಗಳನ್ನು ನೂಡುವಂಥದ್ದು ಇನ್ನೊಂದು.

ಆದರೆ ಸ್ವಯಂ ಸರ್ಕಾರದ ಇಂಥ ವಿಭಿನ್ನ ಹಾಗೂ ವಿಶಿಷ್ಟ ಪ್ರಯೋಗವನ್ನು ನಾವು ಮಾಡುತ್ತಿರುವುದು ಅನಕ್ಷರತೆ ಅಧಿಕವಾಗಿರುವ ಭಾರತೀಯ ಸಮುದಾಯದಲ್ಲಿ ಎನ್ನುವುದನ್ನು ಮರೆಯುವಂತಿಲ್ಲ. ಇಂಥ ಪಂಚಾಯ್ತಿಗಳಿಗೆ ಆಯ್ಕೆಯಾಗುವ ಹಲವಾರು ಮಂದಿ ಅದರಲ್ಲೂ ಪ್ರಮುಖವಾಗಿ ಮೀಸಲಾತಿ ವರ್ಗದಲ್ಲಿ ಆಯ್ಕೆಯಾದವರು ಬಡವರು. ಅವರು ತಮ್ಮ ಒಂದು ದಿನದ ಕೂಲಿಯನ್ನು ಬಿಟ್ಟು ಪಂಚಾಯ್ತಿ ಸಭೆಗಳಿಗೆ ಹಾಜರಾಗಬೇಕಾದ ಅನಿವಾರ್ಯತೆ ಇರುತ್ತದೆ. ಖ್ಯಾತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಜನಪ್ರಿಯಗೊಳಿಸಿದ ಪರಿಕಲ್ಪನೆಯಂತೆ, ಪ್ರಜಾಪ್ರಭುತ್ವದ ಈ ದೊಡ್ಡ ನಾಟಕದಲ್ಲಿ ನಟಿಸುವ ಪಾತ್ರಧಾರಿಗಳು ಅವರು ಏನಾಗಿರಬೇಕೋ ಅದಕ್ಕಿಂತ ಕೆಳಹಂತದಲ್ಲಿ ಇರುವವರು. ಈ ಕಾರಣದಿಂದ ಅವರ ಪಾತ್ರ ನಿರ್ವಹಿಸುವ ಸಾಮರ್ಥ್ಯ ಕೂಡಾ ಕಡಿಮೆ ಇರುತ್ತದೆ.

ಒಟ್ಟಿನಲ್ಲಿ, ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಗೆ, ಪಂಚಾಯತ್‌ರಾಜ್ ವ್ಯವಸ್ಥೆಗಿಂತ ಹೆಚ್ಚಿನ ಅಂಶಗಳು ಬೇಕು. ಹಾಗೆಂದ ಮಾತ್ರಕ್ಕೆ ಪಂಚಾಯತ್‌ರಾಜ್ ಸಂಸ್ಥೆಗಳು ಅಗತ್ಯವಿಲ್ಲ ಎಂದಲ್ಲ. ಈಗ ಇರುವ ಪಂಚಾಯತ್‌ರಾಜ್ ಸಂಸ್ಥೆಗಳು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ ಎಂದಲ್ಲ. ಪಂಚಾಯತ್‌ರಾಜ್ ಸಂಸ್ಥೆಗಳು ತಳಮಟ್ಟದ ಪ್ರಜಾಪ್ರಭುತ್ವದ ಬುನಾದಿಗಳಾಗಿದ್ದು, ಅವು ಅನಿವಾರ್ಯ; ಆದರೆ ಉತ್ತಮ ಸಾಮಾಜಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಇವಿಷ್ಟೇ ಸಾಲದು ಎನ್ನುವುದು ವಾಸ್ತವ. ಈ ವರ್ಗಾವಣೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಮೀಸಲಾತಿ ಮೂಲಕ ಹೆಚ್ಚಿಸುವುದು ಮೊದಲ ಮಹತ್ವದ ಹೆಜ್ಜೆ.


www.shikarat.com

ಈ ಸಾಮಾಜಿಕ ಬದಲಾವಣೆ ಪ್ರಕ್ರಿಯೆಯಲ್ಲಿ ಕೆಲ ಋಣಾತ್ಮಕ ಹಾಗೂ ಅನಪೇಕ್ಷಿತ ಪರಿಣಾಮಗಳೂ ಉಂಟಾಗಬಹುದು. ಸಂಪನ್ಮೂಲಗಳ ಅಸಮರ್ಪಕ ಬಳಕೆ, ಆಡಳಿತದ ಇತರ ಸಂಸ್ಥೆಗಳು ದುರ್ಬಲಗೊಳ್ಳುವುದು ಮುಂತಾದ ವ್ಯತಿರಿಕ್ತ ಪರಿಣಾಮಗಳು ಆಗಬಹುದು. ಹಾಗೆಂದ ಮಾತ್ರಕ್ಕೆ ಮಹಿಳೆಯರ ಸಬಲೀಕರಣ, ಪಂಚಾಯತ್‌ರಾಜ್ ವ್ಯವಸ್ಥೆಗೆ ಮಾರಕ ಎಂಬ ನಿರ್ಧಾರಕ್ಕೆ ಬರುವಂತಿಲ್ಲ.

ದೇಶದಲ್ಲಿ ಲಿಂಗಸಮಾನತೆ ಅಥವಾ ಲಿಂಗ ನ್ಯಾಯ ದೊರಕಬೇಕಾದರೆ, ಈ ನಿಟ್ಟಿನಲ್ಲಿ ಇನ್ನಷ್ಟು ಪ್ರಯತ್ನ ಅಗತ್ಯವಿದೆ. ಇದಕ್ಕೆ ದೀರ್ಘ ಅವಧಿ ತಗುಲಬಹುದು. ಈ ಬಗ್ಗೆ ನಾವು ತಾಳ್ಮೆ ಕಳೆದುಕೊಳ್ಳುವಂತಿಲ್ಲ. ತಳಮಟ್ಟದ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಿಸಿಕೊಂಡು ಈ ಪ್ರಯತ್ನಕ್ಕೆ ಬೆಂಬಲ ನೀಡುವುದು ನಮ್ಮ ಕರ್ತವ್ಯ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ತಳಮಟ್ಟದ ಪ್ರಜಾಪ್ರಭುತ್ವದ ಸಂಸ್ಥೆ ಎನಿಸಿದ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಾಕಷ್ಟು ಅಧಿಕಾರ ನೀಡಿದ್ದರೂ, ಅಭಿವೃದ್ಧಿ ಕಾರ್ಯಗಳು ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಸಮುದಾಯ ಆಸ್ತಿಗಳ ಸೃಷ್ಟಿಯಲ್ಲಿ ಗುಂಪುಗಾರಿಕೆ ಹಾಗೂ ಭ್ರಷ್ಟಾಚಾರ ಗ್ರಾಮಮಟ್ಟಕ್ಕೂ ಹಬ್ಬಿದೆ. ಸ್ವಜನಪಕ್ಷಪಾತ ಮತ್ತು ಜಾತೀಯತೆ ಕೂಡಾ ಎಲ್ಲೆ ಮೀರಿದೆ. ಶಿಕ್ಷಣ, ಆರೋಗ್ಯ, ಕುಟುಂಬ ಕಲ್ಯಾಣ, ಭೂ ಅಭಿವೃದ್ಧಿ ಚಟುವಟಿಕೆ, ನೀರಾವರಿ, ನೈರ್ಮಲ್ಯ, ಪಶುಸಂಗೋಪನೆ ಮತ್ತಿತರ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಸಾಧಿಸಬೇಕಿದೆ. ಈ ಬಗ್ಗೆ ಗಮನ ಹರಿಸಬೇಕಾದ ಚುನಾಯಿತ ಪ್ರತಿನಿಧಿಗಳು, ಅವರ ಸ್ವ ಹಿತಾಸಕ್ತಿ ಮತ್ತು ಹಣಗಳಿಕೆ ದಂಧೆಯ ಬಗ್ಗೆಯೇ ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ಅವರ ಜಾತಿಯ ವ್ಯಕ್ತಿಯ ಹಿತಾಸಕ್ತಿಯನ್ನು ಕಾಪಾಡುವುದು ಅಥವಾ ತಮ್ಮ ಹಿಂಬಾಲಕರ ಹಿತಾಸಕ್ತಿಗಳನ್ನು ನೇರ ಅಥವಾ ಪರೋಕ್ಷವಾಗಿ ಕಾಪಾಡುವುದಷ್ಟೇ ಇವರ ಆದ್ಯತೆಯಾಗಿದೆ. ಭ್ರಷ್ಟಾಚಾರ, ಜಾತೀಯತೆ, ಗುಂಪುಗಾರಿಕೆ ಮತ್ತಿತರ ಅಂಶಗಳು ಮುಂದುವರಿದರೆ ಇಡೀ ವ್ಯವಸ್ಥೆಯೇ ಬುಡಮೇಲಾಗುವ ಅಪಾಯವಿದೆ. ಇದು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಮಾರಕವಾಗಲಿದ್ದು, ಪಂಚಾಯತ್‌ರಾಜ್ ವ್ಯವಸ್ಥೆಯೇ ಶಿಥಿಲವಾಗುವ ಅಪಾಯ ಎದುರಾಗಲಿದೆ.

### 27. ಅತ್ಯಾಚಾರಿಗೆ ಗಲ್ಲುಶಿಕ್ಷೆ ನೀಡಬೇಕೇ?

ಅತ್ಯಾಚಾರ ಎನ್ನುವುದು ಎಷ್ಟು ದೊಡ್ಡ ಅಪರಾಧವೆಂದರೆ, ಇದರಿಂದ ಸಂತ್ರಸ್ತೆ ಹಾಗೂ ಸಂತ್ರಸ್ತೆಯ ಕುಟುಂಬ ಜೀವನವಿಡೀ ಕೊರಗುತ್ತಲೇ ಇರಬೇಕಾಗುತ್ತದೆ. ಈ ವಿಚಾರದಲ್ಲಿ ಸಂತ್ರಸ್ತೆಯ ತಪ್ಪು ಯಾವುದು ಇಲ್ಲದಿದ್ದರೂ, ಆಕೆ ಅನುಭವಿಸಲೇಬೇಕಾಗುತ್ತದೆ.

ಅತ್ಯಾಚಾರ ಎನ್ನುವುದು ತೀರಾ ಹೇಯ ಕೃತ್ಯ. ಒಬ್ಬ ವ್ಯಕ್ತಿ ಮತ್ತೊಬ್ಬಳ ಮೇಲೆ ತನ್ನ ಸ್ವಂತ ಹಿತಾಸಕ್ತಿಯ ಸಲುವಾಗಿ ನಿಯಂತ್ರಣ, ಪ್ರಾಬಲ್ಯ ಮತ್ತು ಬಲಪ್ರದರ್ಶನ ಮಾಡುವ ಕೃತ್ಯ. ಇದು ವಿಶ್ವವ್ಯಾಪಿ ಪಿಡುಗು. ಅದರ ಹಿಂದೆ ಸಾಮಾಜಿಕ, ಧಾರ್ಮಿಕ ಅಥವಾ ಯುದ್ಧ ಸೇರಿದಂತೆ ಯಾವ ಕಾರಣಗಳೇ ಇದ್ದರೂ, ಅದು ತೀರಾ ನಾಚಿಕೆಗೇಡಿನ ಸಂಗಿ. ಅದು ಕ್ರೋಧ ಮತ್ತು ಭಾವನಾತ್ಮಕ ಪ್ರಜ್ಞಾಶೂನ್ಯ ಸ್ಥಿತಿ. ಅತ್ಯಾಚಾರ ಎನ್ನುವುದು ತೀರಾ ಬರ್ಬರ ಹಾಗೂ ಅಮಾನವೀಯ ಕೃತ್ಯವಾಗಿದ್ದು, ಇದು ಸಂತ್ರಸ್ತೆಯ ಇಡೀ ಜೀವನವನ್ನು ನರಕವಾಗಿಸುತ್ತದೆ.

ಹಲವಾರು ಪ್ರಕರಣಗಳಲ್ಲಿ ಸಂತ್ರಸ್ತೆ, ಈ ಅತ್ಯಾಚಾರಿಗಳ ಜಗತ್ತಿನಲ್ಲಿ ಬದುಕುವುದಕ್ಕಿಂತ ಸಾಯುವುದೇ ಮೇಲು ಎಂಬ ನಿರ್ಧಾರ ಕೈಗೊಂಡು ಆತ್ಮಹತ್ಯೆಗೆ ಶರಣಾಗಿರುವುದೂ ಇದೆ. ಇದಕ್ಕಿಂತಲೂ ಹೀನ ಸ್ಥಿತಿ ಎಂದರೆ, ಆಕೆಯನ್ನು ಮಾಂಸ ದಂಧೆಗೆ ತಳ್ಳಿ, ಸಾಯುವವರೆಗೂ ಲೈಂಗಿಕ ಜೀತ ಮಾಡುವ ಸ್ಥಿತಿ ನಿರ್ಮಿಸಿರುವುದು. ಈ ನರಕದಿಂದ ತಪ್ಪಿಸಿಕೊಂಡ ಸಾವಿರಾರು ಮಂದಿ ಯಾರಿಗೂ ತಿಳಿಯದ, ಗುರುತು ಪರಿಚಯ ಇಲ್ಲದ ಊರಿನಲ್ಲಿ ಅನಾಮಧೇಯರಾಗಿ ಬದುಕು ಸಾಗಿಸುತ್ತಿದ್ದಾರೆ. ಅವರನ್ನು ಅವರ ಸಮಾಜವಾಗಲೀ, ಕುಟುಂಬವಾಗಲೀ, ಸಾಮಾನ್ಯ ಸದಸ್ಯೆ ಎಂದು ಪರಿಗಣಿಸಿ ಸ್ವೀಕರಿಸಲು ನಿರಾಕರಿಸುತ್ತದೆ. ಇವರ ಪರವಾಗಿ ಘೋಷಣೆಗಳನ್ನು ಕೂಗುವ ಸ್ವಯಂಸೇವಾ ಸಂಸ್ಥೆಗಳಿಗಾಗಲೀ, ಮಾನವಹಕ್ಕು ಹೋರಾಟಗಾರರಿಗಾಗಲೀ, ಇತರ ಸಂಘಟನೆಗಳಿಗಾಗಲೀ ಯಾವ ನೈಜ ಕಾಳಜಿಯೂ ಇಲ್ಲ. ಇದರ ಪರಿಣಾಮವಾಗಿ ಸಂತ್ರಸ್ಥರು ದೈಹಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿಯೂ ಮತ್ತಷ್ಟು ಕುಗ್ಗುತ್ತಾರೆ.

ಭಾರತದಲ್ಲಿ ಪ್ರತಿ ಐದು ನಿಮಿಷಗಳಿಗೆ ಒಂದರಂತೆ ಮಹಿಳೆಯರ ಮೇಲೆ ಅಪರಾಧಗಳು ನಡೆಯುತ್ತವೆ. ಪ್ರತಿ 15 ನಿಮಿಷಗಳಿಗೆ ಒಂದರಂತೆ ಕುಚಮರ್ದನ ನಡೆದರೆ, 40 ನಿಮಿಷಗಳಿಗೆ ಒಬ್ಬ ಮಹಿಳೆಯನ್ನು ಅಪಹರಿಸಲಾಗುತ್ತದೆ. 100 ನಿಮಿಷಗಳಿಗೆ ಒಂದರಂತೆ ವರದಕ್ಷಿಣೆ ಸಾವು ಸಂಭವಿಸುತ್ತಿದೆ. ಇದು ತೀರಾ ಕಠಿಣ ಅಂದಾಜು. ಹಲವಾರು ಪ್ರಕರಣಗಳು ಬೆಳಕಿಗೆ ಬಾರದೇ ಹಾಗೆಯೇ ಮುಚ್ಚಿಹೋಗುತ್ತವೆ.

ಮಹಿಳೆಯರ ಲೈಂಗಿಕತೆ ಬಗ್ಗೆ ನಮ್ಮ ದೇಶದಲ್ಲಿ ಇನ್ನೂ ತಪ್ಪುಕಲ್ಪನೆ ಇದೆ. ಬಹಳಷ್ಟು ಮಹಿಳೆಯರಿಗೆ ಇಂದಿಗೂ ಸಮಾನ ಹಕ್ಕುಗಳಿಲ್ಲ. ಬಹುತೇಕ ಪ್ರಕರಣಗಳಲ್ಲಿ ಪುರುಷರಿಗೆ ಮದುವೆಗಿಂತ ಮೊದಲೇ ಲೈಂಗಿಕ ಅನುಭವ ಇರುತ್ತದೆ. ಆದರೆ ಅವರು ಮಾತ್ರ ತಮ್ಮ ಪತ್ನಿಯಾಗುವಾಕೆ ಪರಿಶುದ್ಧಳಾಗಿರಬೇಕು ಮತ್ತು ಕನ್ಯೆಯಾಗಿರಬೇಕು ಎಂದು ಬಯಸುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಅತ್ಯಾಚಾರಕ್ಕೆ ಒಳಗಾದ ಹುಡುಗಿ, ಆ ಘಟನೆಯಿಂದ ಆದ ಆಘಾತಕ್ಕಿಂತ, ಆ ಸಮಾಜ ಆಕೆಯನ್ನು ನೋಡುವ ದೃಷ್ಟಿಯಿಂದ ಹೆಚ್ಚಿನ ಆಘಾತ ಅನುಭವಿಸುತ್ತಾಳೆ. ಹಲವಾರು ಪ್ರಕರಣಗಳಲ್ಲಿ ನಿಜ ಅತ್ಯಾಚಾರಿಗಳು ಕೂಡಾ ನ್ಯಾಯದ ಕುಣಿಕೆಯಿಂದ ತಪ್ಪಿಸಿಕೊಳ್ಳುವ ನಿದರ್ಶನಗಳು ಕಾಣುತ್ತವೆ. ಒಂದು ವೇಳೆ ಇಂಥ ಸಂತ್ರಸ್ತ ಹುಡುಗಿ ಅವಿವಾಹಿತೆಯಾದರೆ ಆಕೆ ಒಬ್ಬಂಟಿಯಾಗಿಯೇ ಬಾಳು ಸಾಗಿಸಬೇಕು ಮತ್ತು ಹಲವು ಕೆಟ್ಟ ದೃಷ್ಟಿಗಳನ್ನು ನಿರಂತರವಾಗಿ ಸಹಿಸಿಕೊಳ್ಳಬೇಕಾಗುತ್ತದೆ. ಆಕೆ ತನ್ನ ವಿವಾಹವನ್ನು ಕನಸಿನಲ್ಲೂ ಕಲ್ಪಿಸಿಕೊಳ್ಳುವಂತಿಲ್ಲ. ಆಕೆಗೆ ಮದುವೆ ಪ್ರಸ್ತಾಪಗಳೇ ಬರುವುದಿಲ್ಲ. ಹಾಗೆಂದ ಮಾತ್ರಕ್ಕೆ ವಿವಾಹವೇ ಮಹಿಳೆಯರ ಜೀವನದ ಗುರಿಯಲ್ಲ. ಆದರೆ ಒಬ್ಬಂಟಿ ಹುಡುಗಿಯನ್ನು ಮತ್ತಷ್ಟು ಕೆಟ್ಟದಾಗಿ ಕಾಣಲಾಗುತ್ತದೆ. ಭಾರತೀಯ ವ್ಯಕ್ತಿಯ ವಿಕೃತ ಮನೋಭಾವ ಎಂದರೆ, ಹುಡುಗಿಯ ವ್ಯಕ್ತಿತ್ವಕ್ಕಿಂತ ಕನ್ಯತ್ವಕ್ಕೇ ಮಹತ್ವ ನೀಡುವ ಮನೋಭಾವ. ದೊಡ್ಡ ನಗರಗಳಲ್ಲಿ ಮನೋಭಾವ ನಿಧಾನವಾಗಿ ಬದಲಾಗುತ್ತಿದ್ದರೂ, ದೇಶದಲ್ಲಿ ಅತಿಯಾಗಿ ಇರುವ ಹಳ್ಳಿಗಳಲ್ಲಿ ಮತ್ತು ಸಣ್ಣ ನಗರಗಳಲ್ಲಿ ಪರಿಸ್ಥಿತಿ ಬದಲಾಗಿಲ್ಲ.

ಆಂಧ್ರಪ್ರದೇಶದಲ್ಲಿ ಇತ್ತೀಚೆಗೆ ಅತ್ಯಾಚಾರವನ್ನು ಕೇಂದ್ರೀಕರಿಸಿಕೊಂಡ ಚಲನಚಿತ್ರವೊಂದು ಬಿಡುಗಡೆಯಾಗಿದೆ. ಈ ಚಿತ್ರದಲ್ಲಿ ಸಂಭಾಷಣೆಗಳು ಅತ್ಯಾಚಾರ ಸಂತ್ರಸ್ತೆಯ ವಿವಾಹಕ್ಕೆ ಸಂಬಂಧಿಸಿದ್ದು: "ಒಬ್ಬ ಉಂಡ ಎಂಜಲು ತಟ್ಟೆಯಲ್ಲಿ ಮತ್ತೊಬ್ಬ ವ್ಯಕ್ತಿ ಉಣ್ಣಲು ಹೇಗೆ ಸಾಧ್ಯ?" ಇದು ಭಾರತದ ಪುರುಷರ ಮನೋಭಾವಕ್ಕೆ ಕನ್ನಡಿ ಹಿಡಿಯುತ್ತದೆ. ಅತ್ಯಾಚಾರ ಸಂತ್ರಸ್ತೆಯನ್ನೇ ತಪ್ಪಿತಸ್ಥರು ಎಂದು ನಿರ್ಧರಿಸುವಂಥ ಮನೋಭಾವ. ಅಥವಾ ತಾನೇ ಕೇಳಿ ಅದನ್ನು ಅನುಭವಿಸಿದಂತೆ ಪರಿಗಣಿಸಲಾಗುತ್ತದೆ. ದೇಶದಲ್ಲಿ ನಡೆಯುವ ಶೇಕಡ 60 ರಿಂದ 70ರಷ್ಟು

Universal Coaching Centre



www.shikarat.com

ಅತ್ಯಾಚಾರ ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ ಎನ್ನುವುದು ವಾಸ್ತವ. ವಿವಾಹಿತ ಮಹಿಳೆಯಾಗಿದ್ದರಂತೂ, ಮಹಿಳೆಯ ಭವಿಷ್ಯ ಗಂಡನ ಮನೋಸ್ಥಿತಿಯನ್ನು ಅವಲಂಬಿಸಿರುತ್ತದೆ. ಆತ ವಿಶಾಲ ದೃಷ್ಟಿಕೋನದ ವ್ಯಕ್ತಿಯಾಗಿದ್ದರೆ ಪತ್ನಿಯನ್ನು ಇರಿಸಿಕೊಳ್ಳುತ್ತಾನೆ. ಇಲ್ಲದಿದ್ದರೆ ಆಕೆಯನ್ನು ಹೊರತಳ್ಳುತ್ತಾನೆ. ಅದು ಪುರುಷರ ಮನೋಸ್ಥಿತಿ ಮಾತ್ರವಲ್ಲ; ಮಹಿಳೆಯರ ಮನೋಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಹೆಣ್ಣು ಅತ್ಯಂತ ಪವಿತ್ರಳು ಎಂಬ ಮನೋಭಾವ ಹೊಂದಿರುವ ಮಹಿಳೆಯರು ತಾವು ಒಳ್ಳೆಯವರು ಎನಿಸಿಕೊಳ್ಳುವ ಸಲುವಾಗಿ ಮತ್ತೊಬ್ಬ ಹುಡುಗಿಯ ಚಾರಿತ್ರ್ಯವಧೆ ಮಾಡಲು ಹಿಂಜರಿಯುವುದಿಲ್ಲ. ಮೊಟ್ಟಮೊದಲು ಇಡೀ ಸಮಾಜ ಅತ್ಯಾಚಾರ ಸಂತ್ರಸ್ಥೆಯನ್ನು ಕೀಳಾಗಿ ಕಾಣುವ ಬದಲು ಆಕೆಗೆ ಅನಿವಾರ್ಯವಾಗಿರುವ ಭಾವನಾತ್ಮಕ ಬೆಂಬಲ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು.

ಭಾರತದಲ್ಲಿ ಅತ್ಯಾಚಾರಿಗಳಿಗೆ ಶಿಕ್ಷೆಯಾಗುವ ಪ್ರಮಾಣ ಶೇಕಡ 20ಕ್ಕಿಂತ ಕಡಿಮೆ. ಈ ಶಿಕ್ಷೆಯಾಗುವ ಅತ್ಯಾಚಾರಿಗಳ ಪ್ರಮಾಣ ಹೆಚ್ಚುವರೆಗೂ ಅಪರಾಧಿಗಳ ಸಂಖ್ಯೆ ಕಡಿಮೆಯಾಗದು.

ಭಾರತೀಯ ದಂಡಸಂಹಿತೆಯ 376ನೇ ಸೆಕ್ಷನ್ ಅನ್ವಯ, "ಅತ್ಯಾಚಾರ ಎಸಗಿದ ವ್ಯಕ್ತಿಗಳಿಗೆ ಏಳು ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಜೈಲು ಶಿಕ್ಷೆ ವಿಧಿಸಬೇಕು. ಆದರೆ ಇದನ್ನು ಹತ್ತು ವರ್ಷವರೆಗೆ ಅಥವಾ ಜೀವಾವಧಿ ಶಿಕ್ಷೆಯಾಗಿಯೂ ವಿಸ್ತರಿಸಬಹುದು. ಇದರ ಜತೆಗೆ ಆತ ದಂಡವನ್ನೂ ಪಾವತಿಸಬೇಕು" ಆದರೆ ಈ ಕಾಯ್ದೆಯಲ್ಲಿ ಹೇಳಿರುವ ಶಿಕ್ಷೆ ಇಂಥ ಪೈಶಾಚಿಕ ಬರ್ಬರ ಕೃತ್ಯಕ್ಕೆ ಸಾಲದು ಎನಿಸುತ್ತದೆ. ಇಂಥ ಅತ್ಯಾಚಾರದಿಂದ ಸಂತ್ರಸ್ಥಳಾದ ಮಹಿಳೆ ಇಡೀ ಜೀವನ ಪರ್ಯಂತ ಕಷ್ಟ ಅನುಭವಿಸಬೇಕಾಗುತ್ತದೆ. ಆದರೆ ಇದಕ್ಕೆ ಕಾರಣವಾದ ವ್ಯಕ್ತಿಗೆ ಕೇವಲ ಏಳರಿಂದ ಹತ್ತು ವರ್ಷ ಅಥವಾ ಗರಿಷ್ಠ ಎಂದರೆ ಹದಿನಾಲ್ಕು ವರ್ಷಗಳ ಶಿಕ್ಷೆ!. ಇದು ಖಂಡಿತಾ ನ್ಯಾಯಬದ್ಧವಲ್ಲ!. ಸ್ವಾತಂತ್ರ್ಯ ಬಂದು ಅರುವತ್ತೇಳು ವರ್ಷ ಸಂದರೂ, ಮೂಲಭೂತ ಮಾನವಹಕ್ಕುಗಳನ್ನು ನಮ್ಮ ದೇಶದ ಮಹಿಳೆಯರಿಗೆ ನಾವು ಕಲ್ಪಿಸಿಲ್ಲ.

ನಮ್ಮಲ್ಲಿ ಕಾನೂನುಗಳಿವೆ. ಆದರೆ ಈ ಕಾನೂನುಗಳು ಏಣು ಮಾಡುತ್ತವೆ ಎಂದು ಸಾಮಾನ್ಯವಾಗಿ ಪ್ರಶ್ನಿಸಲಾಗುತ್ತದೆ. ಪೊಲೀಸ್ ಪಡೆಯಲ್ಲಿ ಇರುವ ಸಾಮಾನ್ಯ ಅದಕ್ಷತೆ ಮತ್ತು ಲಂಚದ ಹಾವಳಿ, ಮಹಿಳೆಯರ ಮೇಲೆ ಅಪರಾಧ ಎಸಗಿದವರಿಗೆ ಶಿಕ್ಷೆಯ ಪ್ರಮಾಣ ಕಡಿಮೆಯಾಗಲು ಪ್ರಮುಖ ಕಾರಣ. ಸಮಾಜದಲ್ಲಿ ನಾವು ನಮ್ಮ ಸಂಕುಚಿತ ಮನೋಭಾವವನ್ನು ಬದಲಾಯಿಸಿಕೊಂಡರೆ, ವಾಸ್ತವ ಅತ್ಯಾಚಾರದಿಂದ ಆಗಿರುವ ಆಘಾತವನ್ನು ಕಡಿಮೆ ಮಾಡಲು ನಮಗೆ ಸಾಧ್ಯವಿಲ್ಲದಿದ್ದರೂ, ಸಂತ್ರಸ್ತೆಗೆ ಅಗತ್ಯವಾದ ಮಾನಸಿಕ ಸ್ಥೈರ್ಯವನ್ನು ತುಂಬಿ, ಅತ್ಯಾಚಾರಿ ಕಂಬಿ ಎಣಿಸುವಂತೆ ಖಂಡಿತವಾಗಿಯೂ ಮಾಡಲು ಅವಕಾಶವಿದೆ. ಇದು ಕನಿಷ್ಠ ದೇಶದಲ್ಲಿ ಅತ್ಯಾಚಾರ ಪ್ರಮಾಣವನ್ನಾದರೂ ಕಡಿಮೆ ಮಾಡಬಹುದು.

ಇಂಥ ವಿಕೃತ ಮನೋಭಾವಕ್ಕೆ ಇತರ ಹಲವು ಕಾರಣಗಳೂ ಇವೆ. ಮಹಿಳೆಯರನ್ನು ಜಾಹೀರಾತು ಮತ್ತು ಪರದೆಯ ಮೇಲೆ ಅಶ್ಲೀಲ ಹಾಗೂ ಭೋಗದ ವಸ್ತುವಾಗಿ ಬಿಂಬಿಸುವುದು, ಮಹಿಳಾ ಸ್ವಾಯತ್ತತೆಯನ್ನು ಕೆಟ್ಟ ದೃಷ್ಟಿಯಿಂದ ನೋಡುವುದು ಇಂಥ ಕೆಲ ಅಂಶಗಳು. ಇದು ಸಾಮಾನ್ಯ ಮನುಷ್ಯರು ಮಹಿಳೆಯರ ಮೇಲೆ ಅಪರಾಧಗಳನ್ನು ಎಸಗಲು ಕಾರಣವಾಗುತ್ತದೆ.

ಖಂಡಿತವಾಗಿಯೂ ಈ ಕ್ಷೇತ್ರಗಳಲ್ಲಿ ಕೂಡಾ ಸಮರ ಮುಂದುವರಿಯಬೇಕು. ಇದರ ಜತೆಗೆ ಕಾನೂನು ಕೂಡಾ ಇನ್ನಷ್ಟು ಕಠಿಣವಾಗಿ, ಇಂಥ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಗಲ್ಲುಶಿಕ್ಷೆ ನೀಡಬೇಕು. ಇಂಥ ಪ್ರಕರಣಗಳಲ್ಲಿ ಕ್ಷಿಪ್ರ ಮತ್ತು ಪರಿಣಾಮಕಾಇಯಾಗಿ ನ್ಯಾಯದಾನ ಮಾಡುವ ವ್ಯವಸ್ಥೆ ಬರಬೇಕು. ಭಾರತೀಯ ದಂಡಸಂಹಿತೆ ರೂಪಿಸಿರುವುದು 1860ರಲ್ಲಿ ಎನ್ನುವುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು. ಇಂದು ಹೆಚ್ಚುತ್ತಿರುವ ಪಿಡುಗಿನ ಹಿನ್ನೆಲೆಯಲ್ಲಿ ಈ ಹಳೆಯ ಕಾನೂನು ಯಾವುದೇ ರೀತಿಯಲ್ಲಿ ಪರಿಣಾಮಕಾರಿಯಲ್ಲ. ಇಂಥ ಬರ್ಬರ ಕೃತ್ಯಗಳನ್ನು ಎಸಗಿದ ವ್ಯಕ್ತಿಗಳಿಗೆ ಮರಣದಂಡನೆಗಿಂತ ಕಡಿಮೆ ಶಿಕ್ಷೆ ನೀಡಬಾರದು ಎಂದು ಬಹಳಷ್ಟು ಮಂದಿ ವಾದಿಸುತ್ತಾರೆ. ಇಂಥ ವಿಕೃತ ಮನೋಭಾವದವರನ್ನು ಬದಲಾಯಿಸಲು ಸಾಧ್ಯವೇ ಇಲ್ಲ. ಇಂಥ ಹೇಯ ಕೃತ್ಯಗಳಿಂದ ದೂರ ಇರುವಂತೆ ಭಯ ಹುಟ್ಟಿಸಬೇಕಾದರೆ, ಗಲ್ಲುಶಿಕ್ಷೆಯೊಂದೇ ದಾರಿ. ಒಂದು ಪ್ರಕರಣದಲ್ಲಿ ಅತ್ಯಾಚಾರಿಗೆ ಗಲ್ಲುಶಿಕ್ಷೆಯಾದರೆ, ಇಂಥ ಅತ್ಯಾಚಾರದ ಕನಸು ಕಾಣುತ್ತಿರುವ ನೂರಾರು ಮನಸ್ಸುಗಳಿಗೆ ಅದು ಎಚ್ಚರಿಕೆಯ ಘಂಟೆಯಾಗುತ್ತದೆ. ಸಂತ್ರಸ್ತೆಯ ಹಾಗೂ ಆಕೆಯ ಕುಟುಂಬವನ್ನು ಜೀವನ ಪರ್ಯಂತ ನರಳುವಂತೆ ಮಾಡುವ ವ್ಯಕ್ತಿಯ ಬಗ್ಗೆ ಯಾವ ಕನಿಕರವನ್ನೂ ವ್ಯಕ್ತಪಡಿಸದೇ, ಆತನಿಗೆ ಗಲ್ಲುಶಿಕ್ಷೆ ನೀಡುವುದೇ ಸೂಕ್ತ.

ಕನಿಷ್ಠಪಕ್ಷ ಇಂಥ ಸರಣಿ ಕೃತ್ಯಗಳನ್ನು ಎಸಗುವವರು ಮತ್ತು ನಿರ್ದಯಿ ವ್ಯಕ್ತಿಗಳಿಗಾದರೂ ಕಠಿಣ ಶಿಕ್ಷೆಯನ್ನು ವಿಧಿಸಲೇಬೇಕು. ಅದು ಮರಣ ದಂಡನೆ ಇರಬಹುದು; ಇಲ್ಲವೇ ರಾಸಾಯನಿಕಗಳನ್ನು ಬಳಸಿ ಅವರ ಜನನೇಂದ್ರಿಯವನ್ನು ನಿಷ್ಕ್ರಿಯಗೊಳಿಸುವುದು ಇರಬಹುದು. ಇಂಥ ಅವಕಾಶವನ್ನು ಕಲ್ಪಿಸುವ ಕಾನೂನು ರೂಪಿಸುವಂತೆ ಇತ್ತೀಚೆಗೆ ದೆಹಲಿ ಹೈಕೋರ್ಟ್ ಸರ್ಕಾರಕ್ಕೆ ಸೂಚನೆ ನೀಡಿರುವುದು ಈ ನಿಟ್ಟಿನಲ್ಲಿ ಮಹತ್ವದ ಬೆಳವಣಿಗೆ. ಇದು ಸಾಮಾಜಿಕ ಹೊರೆಯನ್ನು ಸಂತ್ರಸ್ಥೆಯಿಂದ ಅಪರಾಧಿಗೆ ವರ್ಗಾಯಿಸುವಲ್ಲಿ ಮಹತ್ವದ ಹೆಜ್ಜೆಯಾಗುತ್ತದೆ.

ಆದರೆ ನನ್ನ ವೈಯಕ್ತಿಕ ಅಭಿಪ್ರಾಯದಂತೆ ಅತ್ಯಾಚಾರಿಗೆ ಗಲ್ಲುಶಿಕ್ಷೆ ವಿಧಿಸುವುದರಿಂದ ಕೂಡಾ ಯಾವ ಪ್ರಯೋಜನವೂ ಆಗದು. ಅಂಥ ಕ್ರೂರ ಕಾನೂನು ರೂಪಿಸಿದರೆ, ಇದು ಇತರ ದುಷ್ಪರಿಣಾಮಗಳಿಗೆ ಕಾರಣವಾಗಬಹುದು. ಇದರಿಂದ ಮಹಿಳೆಯರ ಹತ್ಯೆ ಹೆಚ್ಚಬಹುದು. ಇಂಥ ಬರ್ಬರ ಕೃತ್ಯದ ಜತೆಗೆ ಮಹಿಳೆಯರ ಮೇಲೆ ಸೇಡು ತೀರಿಸಿಕೊಳ್ಳುವ ಪ್ರವೃತ್ತಿಯನ್ನೂ ಅಪರಾಧಿಗಳು ಬೆಳೆಸಿಕೊಳ್ಳಲು ಇದು ಕಾರಣವಾಗಬಹುದು. ನ್ಯಾಯಾಲಯಗಳು ಉನ್ನತ ಗುಣಮಟ್ಟದ ಸಾಕ್ಷಿಯನ್ನು ನಿರೀಕ್ಷಿಸುತ್ತವೆ. ಇದು ಬಹಳಷ್ಟು ಪ್ರಕರಣಗಳಲ್ಲಿ ಲಭ್ಯವಾಗುವುದಿಲ್ಲ. ಈ ಸಮಸ್ಯೆಗೆ ಇರುವ ಏಕೈಕ ಪರಿಹಾರವೆಂದರೆ ಆಳವಾದ ಸಾಮಾಜಿಕ ಬದಲಾವಣೆ. ಕೆಲ ವ್ಯಕ್ತಿಗಳು ಇಂಥ ಮನೋಭಾವದಲ್ಲಿ ತೊಡಗಲು ಕಾರಣವೇನು? ಅವರ ಬಾಲ್ಯ ಹಹಾಗೂ ಸಾಮಾಜಿಕ ಬೆಳವಣಿಗೆಯ ಸಮಸ್ಯೆಗಳನ್ನು ನಾವು ಪರಿಹರಿಸಬಹುದೇ? ನನ್ನ ಪ್ರಕಾರ, ನಾವು ಈ ಅಂಶಗಳ ಬಗ್ಗೆ ಗಮನ ಹರಿಸಿದಾಗ ಮಾತ್ರ ಈ ಮನೋಪ್ರವೃತ್ತಿಯನ್ನು ಬದಲಾಯಿಸುವುದು ಸಾಧ್ಯ.

## 28. ವೇಶ್ಯಾವಾಟಿಕೆ ಕಾನೂನುಬದ್ಧವಾಗಬೇಕೇ?

ವೇಶ್ಯಾವಾಟಿಕೆಯನ್ನು ವಿಶ್ವದ ಅತ್ಯಂತ ಹಳೆಯ ವೃತ್ತಿ ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಸಮೀರಿಯನ್ನರ ಕಾಲದಲ್ಲಿ ಒಂದು ಬಗೆಯ ಪವಿತ್ರ ವೇಶ್ಯಾವೃತ್ತಿ ಬೆಳೆದುಬಂದಿತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಪ್ರಾಚೀನ ಮೂಲಗಳಲ್ಲಿ ಪವಿತ್ರ ವೇಶ್ಯಾವಾಟಿಕೆಯ


www.shikarat.com

ಹಲವು ನಿದರ್ಶನಗಳು ಕಂಡುಬರುತ್ತವೆ. ಬೆಬಿಲೋನಿಯನ್ನರ ಕಾಲದಲ್ಲಿ ಪ್ರತಿ ಮಹಿಳೆಯರು ವರ್ಷಕ್ಕೆ ಒಂದು ಬಾರಿಯಾದರೂ, ಮಿಲಿಟ್ಟಾ ವನ್ಯಧಾಮಕ್ಕೆ ಭೇಟಿ ನೀಡಬೇಕಿತ್ತು. ಮತ್ತು ಅಲ್ಲಿ ವಿದೇಶಿ ವ್ಯಕ್ತಿಯ ಜತೆಗೆ ರಾಸಲೀಲೆ ನಡೆಸಿ ತೀರಾ ಸಾಂಕೇತಿಕ ದರದಲ್ಲಿ ಆತಿಥ್ಯ ನೀಡಬೇಕಿತ್ತು.

ವೇಶ್ಯಾವಾಟಿಕೆ ಎಂದರೆ ಲೈಂಗಿಕ ಸೇವೆಯನ್ನು ಮಾರಾಟ ಮಾಡುವುದು. ಇದು ಸಾಮಾನ್ಯವಾಗಿ ಮೌಕಿಖ ಲೈಂಗಿಕತೆ ಅಥವಾ ಸಂಭೋಗವಾಗಿರುತ್ತದೆ. ಈ ಸೇವೆಗಳನ್ನು ಹಣ ಅಥವಾ ಇತರ ಪ್ರತಿಫಲಾಪೇಕ್ಷೆಯಿಂದ ನೀಡುವುದನ್ನು ವೇಶ್ಯಾವಾಟಿಕೆ ಎಂದು ಕರೆಯುತ್ತೇವೆ. ಇಂಥವರು ಯಾವ ತಾರತಮ್ಯವೂ ಇಲ್ಲದೇ ಬಹಳಷ್ಟು ವ್ಯಕ್ತಿಗಳಿಗೆ ಇಂಥ ಸೇವೆಯನ್ನು ನೀಡುತ್ತಾ ಬರುತ್ತಾರೆ. ಲೈಂಗಿಕ ಸುಖವನ್ನು ಮಾರಾಟ ಮಾಡುವ ವ್ಯಕ್ತಿ ವೇಶ್ಯೆ ಅಥವಾ ಲೈಂಗಿಕ ಕಾರ್ಯಕರ್ತೆ. ಬಹುತೇಕ ಪ್ರಕರಣಗಳಲ್ಲಿ ಮಹಿಳೆಯರು ಪುರುಷರಿಗೆ ಲೈಂಗಿಕ ಸುಖವನ್ನು ನೀಡುತ್ತಿರುತ್ತಾರೆ. ಆದರೆ ಪುರುಷರು ಕೂಡಾ ಇತರ ಪುರುಷರಿಗೆ ಲೈಂಗಿಕ ಸುಖವನ್ನು ನೀಡುವ ಪ್ರಕರಣಗಳೂ ಇವೆ. ಇವರನ್ನು ಬಾಡಿಗೆ ಹುಡುಗರು ಎಂದು ಕರೆಯಲಾಗುತ್ತದೆ. ಮಹಿಳೆಯರಿಗೆ ಲೈಂಗಿಕ ಸುಖವನ್ನು ನೀಡುವ ಪುರುಷ ವೇಶ್ಯೆಯರು ಕಡಿಮೆ. ಇವರನ್ನು ಗಿಗಲೋಗಳು ಎಂದು ಕರೆಯುತ್ತೇವೆ. ವೇಶ್ಯೆಯರನ್ನು ಬಹುತೇಕ ಸಮಾಜಗಳು, ಧರ್ಮಗಳು ಅವರನ್ನು ಸಾಮಾಜಿಕ ಕಳಂಕ ಎಂದು ಪರಿಗಣಿಸುತ್ತವೆ. ಇಂಥ ಪರಸಂಗದ ಗಂಡಸರ ಬಗ್ಗೆ ಮಾತ್ರ ಈ ದೃಷ್ಟಿಕೋನ ಇರುವುದಿಲ್ಲ.

ಲೈಂಗಿಕ ತೃಪ್ತಿ ಅಥವಾ ಸುಖಕ್ಕಾಗಿ ಲೈಂಗಿಕ ಕ್ರಿಯೆ ನಡೆಸುವುದನ್ನು ಹೊರತುಪಡಿಸಿ ಇತರ ಉದ್ದೇಶಗಳಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿಸಿಕೊಂಡರೆ ಅದನ್ನು ಸಾಮಾನ್ಯವಾಗಿ ವೇಶ್ಯಾವಾಟಿಕೆ ಎಂದು ಕರೆಯುತ್ತೇವೆ. ಇದರಲ್ಲಿ ಧಾರ್ಮಿಕತೆಯ ಹೆಸರಿನಲ್ಲಿ ನೀಡುವ ಲೈಂಗಿಕ ಸೇವೆ ಸೇರುತ್ತದೆ. ಹರಿಕೆ ತೀರಿಸಿಕೊಳ್ಳುವ ಸಲುವಾಗಿ ಹಲವು ಮಂದಿ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವವರೂ ಇದ್ದಾರೆ. ಇಂಥ ಸಂದರ್ಭದಲ್ಲಿ ಈ ರೀತಿಯ ವೇಶ್ಯಾವಾಟಿಕೆಯನ್ನು ಪವಿತ್ರ ಎಂದು ಪರಿಗಣಿಸಲಾಗುತ್ತದೆ. ತೀರಾ ನಿಕೃಷ್ಟ ವಿಧಾನದಿಂದ ಹಣ ಗಳಿಸುವ ವಿಧಾನಕ್ಕೂ ವೇಶ್ಯಾವಾಟಿಕೆ ಎಂದು ಕರೆಯುತ್ತಾರೆ.

ಇಂದು ಹಲವು ಬಗೆಯ ವೇಶ್ಯಾವಾಟಿಕೆ ಜಾರಿಯಲ್ಲಿದೆ. ಬೀದಿ ವೇಶ್ಯಾವಾಟಿಕೆ ಇವುಗಳಲ್ಲೊಂದು. ಇದರಲ್ಲಿ ಸಾಮಾನ್ಯವಾಗಿ ವೇಶ್ಯೆ ಬೀದಿಯಲ್ಲಿ ನಿಂತು ಪುರುಷರನ್ನು ಆಕರ್ಷಿಸುವ ತಂತ್ರಗಳಲ್ಲಿ ತೊಡಗಿರುತ್ತಾಳೆ. ಬೀದಿಯ ಬದಿಯಲ್ಲಿ ಕಾಯುತ್ತಾ, ಬೀದಿಯಲ್ಲಿ ಅತ್ತಿಂದಿತ್ತ ಅಡ್ಡಾಡುತ್ತಾ, ಪ್ರಚೋದಕ ಉಡುಗೆಯಿಂದ ಕಂಗೊಳಿಸುತ್ತಿರುತ್ತಾಳೆ. ಅವರ ಉಡುಗೆಯೇ ಆಕೆ ವೇಶ್ಯೆ ಎನ್ನುವುದನ್ನು ಸೂಚಿಸುತ್ತದೆ. ಇಂಥ ಸಂದರ್ಭದಲ್ಲಿ ಗಿರಾಕಿಗಳ ವಾಹನ ಅಥವಾ ಬಾಡಿಗೆ ಕೊಠಡಿಯಲ್ಲಿ ಲೈಂಗಿಕ ಚಟುವಟಿಕೆ ನಡೆಯುತ್ತದೆ. ಇದು ತೀರಾ ಅಗ್ಗದ ಹಾಗೂ ತೀರಾ ಅಪಾಯಕಾರಿ ವೇಶ್ಯಾವಾಟಿಕೆಯ ವಿಧಾನ. ಬೀದಿ ವೇಶ್ಯೆಯರು ಸಾಮಾನ್ಯವಾಗಿ ಮಾದಕವಸ್ತುಗಳ ವ್ಯಸನಿಗಳಾಗಿರುತ್ತಾರೆ. ಸಾಮಾನ್ಯವಾಗಿ ಗಿರಾಕಿಗಳು ಅಥವಾ ದಲ್ಲಾಳಿಗಳ ಹಿಂಸೆಗೆ ಗುರಿಯಾಗುತ್ತಿರುತ್ತಾರೆ.

ಏಷ್ಯನ್ ದೇಶಗಳಲ್ಲಿ ಹಲವು ಮಸಾಜ್ ಪಾರ್ಲರ್‌ಗಳಲ್ಲಿ ಕೂಡಾ ವೇಶ್ಯಾವಾಟಿಕೆ ನಡೆಯುತ್ತದೆ. ಕೆಲ ಕ್ಷೌರದ ಅಂಗಡಿಗಳಲ್ಲೂ ಹೆಚ್ಚುವರಿ ಟಿಪ್ಸ್ ನೀಡಿದರೆ ಲೈಂಗಿಕ ಸೇವೆಗಳನ್ನು ನೀಡುವ ವ್ಯವಸ್ಥೆ ಇರುತ್ತದೆ. ವೇಶ್ಯಾಗೃಹಗಳು ಇದೇ ಉದ್ದೇಶಕ್ಕಾಗಿ ಸ್ಥಾಪನೆಗೊಂಡ ವ್ಯವಸ್ಥೆ. ಹಲವು ದೊಡ್ಡ ನಗರಗಳಲ್ಲಿ ಇಂಥ ಮನೆಗಳಿರುವ ಪ್ರದೇಶವನ್ನು ಕೆಂಪು ದೀಪದ ಪ್ರದೇಶ ಎಂದೇ ಗುರುತಿಸಲಾಗುತ್ತದೆ.

ಎಸ್ಕಾರ್ಟ್ ವೇಶ್ಯಾವಾಟಿಕೆಯಲ್ಲಿ, ಗ್ರಾಹಕರು ಒಂದು ಏಜೆನ್ಸಿಗೆ ಕರೆ ಮಾಡಿ, ಗ್ರಾಹಕರ ಸ್ಥಳಕ್ಕೆ ವೇಶ್ಯೆಯರನ್ನು ಕಳುಹಿಸಲಾಗುತ್ತದೆ. ಗ್ರಾಹಕರ ಮನೆಗಳಲ್ಲಿ ಅಥವಾ ಗ್ರಾಹಕರ ಹೋಟೆಲ್ ಕೊಠಡಿಗಳಲ್ಲಿ ಇಂಥ ಲೈಂಗಿಕ ಕ್ರಿಯೆಗಳು ನಡೆಯುತ್ತವೆ. ವೇಶ್ಯೆಯರ ಅಪಾರ್ಟ್‌ಮೆಂಟ್‌ಗಳಲ್ಲೂ ಇಂಥ ಚಟುವಟಿಕೆಗಳು ಸಾಮಾನ್ಯವಾಗಿ ನಡೆಯುತ್ತವೆ. ಹಲವು ದೇಶಗಳಲ್ಲಿ ಕಾನೂನುಬದ್ಧ ವೇಶ್ಯಾವಾಟಿಕೆಗೆ ಅವಕಾಶವಿದೆ. ವೇಶ್ಯಾಗೃಹ ಮತ್ತು ಅಪಾರ್ಟ್‌ಮೆಂಟ್ ವೇಶ್ಯಾವಾಟಿಕೆಯ ಸಂಕರಣ ರೂಪ ಎನಿಸಿದ ವ್ಯವಸ್ಥೆ ಜರ್ಮನಿ, ಬೆಲ್ಜಿಯಂ, ಸ್ವಿಜರ್ಲೆಂಡ್ ಮತ್ತು ನೆದರ್ಲೆಂಡ್ ದೇಶಗಳಲ್ಲಿವೆ. ಇಲ್ಲಿ ವೇಶ್ಯೆಯರು ಕೆಂಪುದೀಪದ ಪ್ರದೇಶದಲ್ಲಿ ಒಂದು ಕೊಠಡಿಯ ಅಪಾರ್ಟ್‌ಮೆಂಟ್‌ಗಳನ್ನು ಬಾಡಿಗೆಗೆ ಪಡೆದು, ಕಿಟಕಿಗಳ ಮೂಲಕ ಗ್ರಾಹಕರನ್ನು ಸೆಳೆಯುತ್ತಾರೆ.

ಜಪಾನ್‌ನಲ್ಲಿ ಮಧ್ಯಮವರ್ಗದ ಶಾಲಾ ಬಾಲಕಿಯರು ತಾವಾಗಿಯೇ ವೇಶ್ಯಾವೃತ್ತಿಗೆ ಇಳಿಯುವುದು ಸಾಮಾನ್ಯ. ಸಾಮಾನ್ಯವಾಗಿ ಫೋನ್ ಕ್ಲಬ್‌ಗಳ ಮೂಲಕ ಈ ದಂಧೆ ನಡೆಸುತ್ತಾರೆ. ಮೊದಲು ಅಪರಿಚಿತ ವ್ಯಕ್ತಿಯ ಜತೆ ಫೋನ್ ಸಂಪರ್ಕ ಸಾಧಿಸುತ್ಥಾರೆ. ಹಲವಾರು ದೇಶಗಳಲ್ಲಿ ಅಕ್ರಮ ವಲಸಿಗರು ತಮ್ಮ ಇಚ್ಛೆಗೆ ವಿರುದ್ಧವಾಗಿ ಬಲಾತ್ಕಾರದಿಂದ ವೇಶ್ಯಾವಾಟಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಬಲಾತ್ಕಾರವಾಗಿ ವೇಶ್ಯಾವಾಟಿಕೆಗೆ ತಳ್ಳುವುದನ್ನು ಲೈಂಗಿಕ ಜೀತ ಎಂದು ಕರೆಯುತ್ತೇವೆ. ಮೊದಲ ಜಗತ್ತಿನ ದೇಶಗಳಲ್ಲದೇ, ಇವುದಕ್ಷಿಣ ಏಷ್ಯಾ ದೇಶಗಳಾದ ಭಾರತ ಮತ್ತು ಥಾಯ್ಲೆಂಡ್‌ನಲ್ಲಿ ಕೂಡಾ ನಡೆಯುತ್ತದೆ. ಇಲ್ಲಿ ಯುವತಿಯರನ್ನು ಸಾಮಾನ್ಯವಾಗಿ ವೇಶ್ಯಾಗೃಹಗಳಿಗೆ ಮಾರಾಟ ಮಾಡಲಾಗುತ್ತದೆ. ಆದರೆ ಆಧುನಿಕ ಥಾಯ್ಲೆಂಡ್‌ನಲ್ಲಿ ಇದು ಅಪರೂಪ. ಈ ಎರಡೂ ಸಮಾಜಗಳಲ್ಲಿ, ವೇಶ್ಯಾಗೃಹಗಳಿಗೆ ಭೇಟಿ ನಿಡುವುದು ಸಾಮಾನ್ಯ ನಡವಳಿಕೆ. ಥಾಯ್ಲೆಂಡ್ ಲೈಂಗಿಕ ಪ್ರವಾಸೋದ್ಯಮಕ್ಕೆ ಹೆಸರಾದ ದೇಶ. ಶ್ರೀಮಂತ ರಾಷ್ಟ್ರಗಳ ಹಲವು ಮಂದಿ ಇಲ್ಲಿಗೆ ಸ್ವಚ್ಛ ಹಾಗೂ ಶುದ್ಧ ಲೈಂಗಿಕ ಸೇವೆಯನ್ನು ಅರಸಿ ಬರುತ್ತಾರೆ. ಬ್ರೆಜಿಲ್, ಕೆರೀಬಿಯನ್ ದೇಶಗಳು ಮತ್ತು ಹಿಂದಿನ ಪೌರಾತ್ಯ ದೇಶಗಳು ಲೈಂಗಿಕ ಪ್ರವಾಸೋದ್ಯಮದ ತಾಣಗಳು.

ಮಹಿಳಾ ವೇಶ್ಯೆಯರು ಅದರಲ್ಲೂ ಮುಖ್ಯವಾಗಿ ಬೀದಿವೇಶ್ಯೆಯರು ಮಧ್ಯವರ್ತಿಯ ಜತೆ ಸಂಬಂಧ ಇಟ್ಟುಕೊಂಡಿರುತ್ತಾರೆ. ಹಲವು ವೇಶ್ಯೆಯರ ಸಂಪಾದನೆಯ ಪಾಲನ್ನು ಹಂಚಿಕೊಂಡು ಇಂಥ ಪಿಂಪ್‌ಗಳು ಜೀವನ ಸಾಗಿಸುತ್ತಾರೆ. ಇಂಥ ಹಲವು ಮಂದಿ ವೇಶ್ಯೆಯರ ರಕ್ಷಣೆಯನ್ನೂ ಮಾಡುತ್ತಿರುತ್ತಾರೆ. ಆದರೆ ಇವರ ಸಂಬಂಧ ಸಾಮಾನ್ಯವಾಗಿ ಸುಮಧುರವಾಗಿರುವುದಿಲ್ಲ.

ಲೈಂಗಿಕ ಸುಖಕ್ಕಾಗಿ ವಯಸ್ಕರು ಹಣ ನೀಡುವುದು ಹಲವು ದೇಶಗಳಲ್ಲಿ ಕಾನೂನುಬದ್ಧ. ನೆವಾಡ ದೇಶಗಳನ್ನು ಹೊರತುಪಡಿಸಿ ಅಮೆರಿಕ ಸಂಯುಕ್ತ ಸಂಸ್ಥಾನ, ಮುಸ್ಲಿಂ ಹಾಗೂ ವಿವಿಧ ಕಮ್ಯುನಿಸ್ಟ್ ದೇಶಗಳು ಮಾತ್ರ ಇದಕ್ಕೆ ಅಪವಾದ. ಒಂದೆಡೆ ಹಲವು ಮುಸ್ಲಿಂ ರಾಷ್ಟ್ರಗಳಲ್ಲಿ ವೇಶ್ಯಾವಾಟಿಕೆಗೆ ಮರಣದಂಡನೆಯಂಥ ಕಠಿಣ ಶಿಕ್ಷೆ ಇದೆ. ಇನ್ನೊಂದೆಡೆ ನೆದರ್ಲೆಂಡ್ಸ್‌ನಂಥ ದೇಶಗಳಲ್ಲಿ ವೇಶ್ಯೆಯರು ತೆರಿಗೆ ಪಾವತಿಸಬೇಕಾಗುತ್ತದೆ ಮತ್ತು ವೃತ್ತಿಸಂಘಟನೆಗಳನ್ನೂ ಕಟ್ಟಿಕೊಂಡಿರುತ್ತಾರೆ. ಇಲ್ಲಿ ವೇಶ್ಯಾಗೃಹಗಳು ಕಾನೂನುಬದ್ಧ. ಇಲ್ಲಿ ಲೈಂಗಿಕ ವ್ಯಾಪಾರ ನಡೆಯುತ್ತಿರುತ್ತದೆ. ಅದಾಗ್ಯೂ ವೇಶ್ಯಾವಾಟಿಕೆಯಲ್ಲಿ ತೊಡಗಿಸಿಕೊಳ್ಳಲು ಕಾನೂನುಬದ್ಧವಾಗಿ ಹದಿನೆಂಟು ವರ್ಷ ತುಂಬಿರಬೇಕು. ಆದರೆ


www.shikarat.com

ಇದನ್ನು ಸಾಮಾನ್ಯವಾಗಿ ಕಠಿಣವಾಗಿ ಪರಿಗಣಿಸುವುದಿಲ್ಲ. ಆದರೆ ಇತರ ಹಲವಾರು ದೇಶಗಳಲ್ಲಿ ವೇಶ್ಯಾವಾಟಿಕೆಯನ್ನು ಕಾನೂನುಬದ್ಧವಾಗಿ ನಡೆಸಲು ಸಾಧ್ಯವಿಲ್ಲ. ಇದಕ್ಕೆ ವಿಭಿನ್ನ ಕಾರಣಗಳಿವೆ. ಏಕೆಂದರೆ ಇಲ್ಲಿ ಕರವೇಣ್ಣುಗಳು ಓಡಾಡುವುದು, ಜಾಹೀರಾತು ನೀಡುವುದು, ಪ್ರಚೋದಿಸುವುದು, ದಲ್ಲಾಳಿಗಳಾಗಿ ಕಾರ್ಯನಿರ್ವಹಿಸುವುದು, ವೇಶ್ಯಾಗೃಹಗಳನ್ನು ನಿರ್ವಹಿಸುವುದು ಮತ್ತು ಅಲ್ಲಿ ಕೆಲಸ ಮಾಡುವುದು ಕಾನೂನುಬದ್ಧವಲ್ಲ.

ಸ್ವೀಡನ್‌ನಲ್ಲಿ ವಿಚಿತ್ರವೆಂದರೆ ಲೈಂಗಿಕ ಸೇವೆಯನ್ನು ಖರೀದಿಸುವುದನ್ನು ಕಾನೂನು ಪರಿಧಿಯಿಂದ ಹೊರಗಿಟ್ಟಿದೆ. ಆದರೆ ಲೈಂಗಿಕ ಸೇವೆ ಮಾರಾಟವನ್ನಲ್ಲ. ಕಾನೂನು ಜಾರಿಯ ಸಂಸ್ಥೆಗಳು ಸಾಮಾನ್ಯವಾಗಿ, ಲೈಂಗಿಕ ಜೀತದಂಥ ಪದ್ಧತಿ ಇರುವ ಸಂಸ್ಥೆಗಳ ಮೇಲೆ ಕಣ್ಣಿಟ್ಟಿರುತ್ತವೆ. ಅಥವಾ ಇಂಥ ವೇಶ್ಯಾಗೃಹಗಳನ್ನು ಸಂಘಟಿತ ಅಪರಾಧಿಗಳು ನಡೆಸುತ್ತಿದ್ದರೆ, ಸಾರ್ವಜನಿಕರು ದೂರು ನೀಡಿದ ಸಂಸ್ಥೆಗಳ ಮೇಲೆ ಕಾರ್ಯಾಚರಣೆ ನಡೆಸುತ್ತಾರೆ. ಹಲವು ದೇಶಗಳಲ್ಲಿ ವೇಶ್ಯಾವಾಟಿಕೆ ಕಾನೂನುಬದ್ಧವಾಗಿದ್ದು, ಕೆಲ ವಿಧಾನಗಳ ವೇಶ್ಯಾವಾಟಿಕೆಗೆ ಅವಕಾಶವಿದೆ. ಇಂಥ ಕಡೆಗಳಲ್ಲಿ ಪೊಲೀಸರು ವೇಶ್ಯಾವಾಟಿಕೆಯನ್ನು ಹಣ ಸುಲಿಗೆ ಮಾಡುವ ಕೇಂದ್ರಗಳಾಗಿ ಬಳಸಿಕೊಳ್ಳುತ್ತಾರೆ ಅಥವಾ ಲೈಂಗಿಕ ಸುಖ ನೀಡದಿದ್ದರೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ನೀಡುತ್ತಾರೆ.

ಕೆಲ ಕಾರ್ಯವ್ಯಾಪ್ತಿಯಲ್ಲಿ, ನೆವಾಡಾ ಸ್ವಿಡ್ಜರ್‌ಲೆಂಡ್ ಮತ್ತು ಆಸ್ಟ್ರೇಲಿಯಾದ ಹಲವು ರಾಜ್ಯಗಳಲ್ಲಿ ವೇಶ್ಯಾವಾಟಿಕೆ ಕಾನೂನುಬದ್ಧ. ಆದರೆ ಇದಕ್ಕೆ ಕಟ್ಟುನಿಟ್ಟಿನ ನಿಯಂತ್ರಣಗಳು ಇವೆ. ಮುಕ್ತ ಸಮಾಜದಲ್ಲಿ ವೇಶ್ಯಾವಾಟಿಕೆಯನ್ನು ಸಂಪೂರ್ಣ ತೊಡೆದುಹಾಕುವುದು ಸಾಧ್ಯವಿಲ್ಲ ಎಂಬ ದೃಷ್ಟಿಯಿಂದ ಹಲವು ನಿರ್ಬಂಧಗಳನ್ನು ವಿಧಿಸಲಾಗಿದೆ. ಲೈಂಗಿಕ ಚಟುವಟಿಕೆಗಳಿಂದ ಹರಡುವ ರೋಗವನ್ನು ನಿಯಂತ್ರಿಸುವುದು, ಲೈಂಗಿಕ ಜೀತವನ್ನು ಕಡಿಮೆ ಮಾಡುವುದು, ವೇಶ್ಯಾಗೃಹಗಳು ಕಾರ್ಯನಿರ್ವಹಿಸುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಹೀಗೆ ಪ್ರದೇಶದಿಂದ ಪ್ರದೇಶಕ್ಕೆ ನಿಯಂತ್ರಣ ವಿಧಾನಗಳು ಬದಲಾಗುತ್ತವೆ.

ಡೈಲಿ ಪ್ಲಾನೆಟ್ ಎನ್ನುವುದು ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿರುವ ಪ್ರಮುಖ ವೇಶ್ಯಾಗೃಹ. ಇದರ ಷೇರುಗಳು ಆಸ್ಟ್ರೇಲಿಯಾದ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಲಿಸ್ಟೆಡ್ ಷೇರುಗಳು. ಹಲವು ಪಾಶ್ಚಾತ್ಯ ದೇಶಗಳು ಇತ್ತೀಚೆಗೆ ಲೈಂಗಿಕ ಪ್ರವಾಸಿಗಳಾಗಿ ಬೇರೆ ದೇಶಗಳಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯರ ಜತೆ ಲೈಂಗಿಕ ಕ್ರಿಯೆ ನಡೆಸುವವರನ್ನು ಶಿಕ್ಷಿಸುವ ಕಾನೂನುಗಳನ್ನು ಜಾರಿಗೆ ತಂದಿವೆ. ಆದರೆ ಇದರ ಕಟ್ಟುನಿಟ್ಟಿನ ಜಾರಿ ಆಗಿಲ್ಲ.

ವೇಶ್ಯಾವಾಟಿಕೆಯಲ್ಲಿ ಭಾರಿ ಸಂಖ್ಯೆಯ ಲೈಂಗಿಕ ಪಾಲುದಾರರನ್ನು ಹೊಂದಿರುವುದರಿಂದ, ವೇಶ್ಯೆಯರು ಸಾಮಾನ್ಯವಾಗಿ ಏಡ್ಸ್‌ನಂಥ ಲೈಂಗಿಕತೆಯಿಂದ ಹರಡುವ ರೋಗಗಳ ತಾಣವಾಗಿರುತ್ತಾರೆ.

ಇಂಥ ಸಮಸ್ಯೆಗಳಿಗೆ ಹಲವು ಪ್ರತಿಕ್ರಿಯೆಗಳು ಬರುತ್ತಿವೆ. ವೇಶ್ಯಾವಾಟಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು, ವೇಶ್ಯೆಯರ ನೋಂದಾವಣಿಯನ್ನು ಕಡ್ಡಾಯವಾಗಿ ಮಾಡಬೇಕು, ಕಡ್ಡಾಯ ಆರೋಗ್ಯ ತಪಾಸಣೆ ಮತ್ತು ಸಾರ್ವಜನಿಕ ಆರೋಗ್ಯ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು, ವೇಶ್ಯೆಯರು ಮತ್ತು ಅವರ ಸಂಗ ಮಾಡುವವರು ಗರ್ಭನಿರೋಧಕಗಳ ಬಳಕೆ ಮತ್ತು ಆರೋಗ್ಯ ಕಾಳಜಿ ಬಗ್ಗೆ ವಿಚಾರ ವಿನಿಮಯಕ್ಕೆ ಅವಕಾಶವಿರಬೇಕು ಎಂಬ ಸಲಹೆಗಳೂ ಇವೆ. ಕೆಲವರು ಮೊದಲ ಎರಡು ಕ್ರಮಗಳು ವ್ಯತಿರಿಕ್ತ ಪರಿಣಾಮ ಬೀರಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ವೇಶ್ಯಾವಾಟಿಕೆಯನ್ನು ನಿಷೇಧಿಸುವುದರಿಂದ ಅದು ಭೂಗತ ಚಟುವಟಿಕೆಯಾಗಿ ತಲೆ ಎತ್ತುವ ಅಪಾಯವಿದೆ. ಇದು ಚಿಕಿತ್ಸೆ ನೀಡುವುದು ಮತ್ತು ನಿರ್ವಹಿಸುವುದನ್ನು ಮತ್ತಷ್ಟು ಕಠಿಣಗೊಳಿಸಲಿದೆ. ವೇಶ್ಯೆಯರ ರಿಜಿಸ್ಟ್ರೇಷನ್ ಮಾಡುವ ಕ್ರಮ ಸರ್ಕಾರವನ್ನು ಪಿಂಪ್ ಆಗಿ ರೂಪಿಸಿದಂತಾಗುತ್ತದೆ. ಇದರ ಜತೆಗೆ ನೊಂದಾವಣೆಯಾಗದ ವೇಶ್ಯೆಯರ ನಡವಳಿಕೆಯ ಮೇಲೆ ಯಾವ ನಿಯಂತ್ರಣವನ್ನೂ ಹೊಂದಿರುವುದಿಲ್ಲ. ಕೊನೆಯ ಎರಡು ಕ್ರಮಗಳಿಂದ ಹಾನಿಯಾಗುವುದನ್ನು ಬಹುಮಟ್ಟಿಗೆ ತಪ್ಪಿಸಬಹುದು ಎನಿಸುತ್ತದೆ.

ಹಲವು ದೇಶಗಳಲ್ಲಿ ಲೈಂಗಿಕ ಕಾರ್ಯಕರ್ತರ ಪರವಾಗಿ ಚಳವಳಿ ಮಾಡುವ ಪ್ರಭಾವಿ ಗುಂಪುಗಳು ವೇಶ್ಯಾವಾಟಿಕೆಯನ್ನು ಅಪರಾಧ ಎಂದು ಪರಿಗಣಿಸುವುದು ಮತ್ತು ವೇಶ್ಯೆಯರ ಬಗ್ಗೆ ತಾರತಮ್ಯ ಅನುಸರಿಸುವುದರ ವಿರುದ್ಧ ಚಳವಳಿಗಳನ್ನು ನಡೆಸುತ್ತಿವೆ. ಇಂಥ ಗುಂಪುಗಳು ಸಾಮಾನ್ಯವಾಗಿ ನೆವಡ ಶೈಲಿಯ ನಿಯಂತ್ರಣವನ್ನು ವಿರೋಧಿಸುತ್ತವೆ. ಜತೆಗೆ ವೇಶ್ಯೆಯರನ್ನೂ ಇತರ ವೃತ್ತಿಪರರಂತೆ ಪರಿಗಣಿಸಬೇಕು ಎಂದು ಆಗ್ರಹಿಸುತ್ತಿವೆ. ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವ ಇನ್ನೊಂದು ಗುಂಪು ವೇಶ್ಯಾವಾಟಿಕೆಯನ್ನು ಕಾನೂನು ಪ್ರಶ್ನೆಯಾಗಿ ಪರಿಗಣಿಸದೇ, ಮಹಿಳೆಯರು ಈ ಕೂಪದಿಂದ ಹೊರಬರುವುದನ್ನು ಪ್ರೋತ್ಸಾಹಿಸುವ ಕ್ರಮಗಳನ್ನು ಪ್ರತಿಪಾದಿಸುತ್ತದೆ.

ವೇಶ್ಯಾವಾಟಿಕೆ ಬಗ್ಗೆ ಮಹಿಳಾವಾದಿಗಳ ನಿಲುವುಗಳು ವಿಭಿನ್ನವಾಗಿವೆ. ಕೆಲ ಮಹಿಳಾವಾದಿಗಳು ವೇಶ್ಯಾವಾಟಿಕೆಯನ್ನು ಲೈಂಗಿಕ ಸ್ವಯಂಬದ್ಧತೆಯ ಕ್ರಮ ಎಂದು ಪರಿಗಣಿಸುತ್ತಾರೆ. ವೇಶ್ಯೆಯರ ವಿರುದ್ಧದ ತಾರತಮ್ಯದ ಬಗ್ಗೆ ಧ್ವನಿ ಎತ್ತುವ ಇವರು, ವೇಶ್ಯಾವಾಟಿಕೆಯನ್ನು ಕಳಂಕ ಎಂದು ಬಿಂಬಿಸುವುದು ನಿಲ್ಲಬೇಕು ಹಾಗೂ ಇದನ್ನು ಅಪರಾಧ ಎಂದು ಪರಿಗಣಿಸಬಾರದು ಎಂದು ಆಗ್ರಹಿಸುತ್ತಾರೆ. ಅಮೆರಿಕದ ಉಗ್ರ ಮಹಿಳಾ ಹೋರಾಟಗಾರ್ತಿ ಹಾಗೂ ಮಾಜಿ ವೇಶ್ಯೆ ಆಂಡ್ರಿಯಾ ಡೋರ್ಕಿನ್ ಅವರ ವಾದವನ್ನು ಬೆಂಬಲಿಸುವ ಹಲವಾರು ಮಂದಿ ಇದನ್ನು ಲೈಂಗಿಕ ನಿಂದನೆ ಅಥವಾ ಅತ್ಯಾಚಾರ ಎಂದು ವಾದಿಸುತ್ತಾರೆ. ಮೊದಲ ಗುಂಪು ಜರ್ಮನಿಯಲ್ಲಿ ಕಾನೂನು ಸುಧಾರಣೆಗೆ ಆಗ್ರಹಿಸಿದ್ದರ ಫಲವಾಗಿ, ವೇಶ್ಯಾವಾಟಿಕೆಯನ್ನು ಕಾಯಂ ವೃತ್ತಿ ಎಂದು ಮಾನ್ಯಮಾಡಲಾಗಿದೆ. ಇದರಿಂದ ವೇಶ್ಯೆಯರು ಕೂಡಾ ಇತರ ವೃತ್ತಿನಿರತರಂತೆ ಸಾಮಾಜಿಕ ಭದ್ರತೆ ಮತ್ತು ಆರೋಗ್ಯ ಆರೈಕೆ ಪಡೆಯುವ ಸೌಲಭ್ಯವನ್ನು ಹೊಂದಿದ್ದಾರೆ. ಕಾರ್ಮಿಕ ಸಂಘಟನೆಗಳನ್ನೂ ರಚಿಸಿಕೊಂಡಿದ್ದಾರೆ. ಮತ್ತೊಂದು ಗುಂಪಿನವರು ಸ್ವೀಡನ್‌ನಲ್ಲಿ 1999ರಲ್ಲಿ ಮೇಲೆ ಹೇಳಿದ ಕಾನೂನನ್ನು ಜಾರಿಗೆ ತರುವಲ್ಲಿ ಪ್ರಭಾವ ಬೀರಿದ್ದಾರೆ. ಇಲ್ಲಿ ಲೈಂಗಿಕ ಸುಖ ಖರೀದಿಸುವುದು ಅಪರಾಧವಲ್ಲ; ಆದರೆ ನೀಡುವುದು ಅಪರಾಧ.

ವಿಶ್ವಸಂಸ್ಥೆ 1949ರಲ್ಲಿ, ಒಂದು ಸಮಾವೇಶವನ್ನು ಆಯೋಜಿಸಿ, ವೇಶ್ಯಾವಾಟಿಕೆ ಸ್ವೀಕಾರಾರ್ಹವಲ್ಲ. ಇದು ಮಾನವನ ಘನತೆ ಗೌರವಕ್ಕೆ ತಕ್ಕುದಾದ ವೃತ್ತಿಯಲ್ಲ. ಈ ಸಮಾವೇಶದಲ್ಲಿ ಸಹಿ ಮಾಡುವ ಎಲ್ಲ ದೇಶಗಳು ಕೂಡಾ ಪಿಂಪ್‌ಗಳನ್ನು, ವೇಶ್ಯಾಗೃಹ ಮಾಲೀಕರನ್ನು ಮತ್ತು ಇದರಲ್ಲಿ ನಿರತರಾಗಿರುವವನ್ನು ಶಿಕ್ಷಿಸಬೇಕು ಹಾಗೂ ಎಲ್ಲ ವಿಶೇಷ ಪರಿಗಣನೆ ಅಥವಾ ನೊಂದಾಯಿತ ವೇಶ್ಯಾವಾಟಿಕೆಯನ್ನೂ ರದ್ದು ಮಾಡಬೇಕು ಎಂದು ಸೂಚಿಸಿತು. ಈ ಕುರಿತ ನಿರ್ಣಯಕ್ಕೆ 89 ದೇಶಗಳು ಸಹಿ ಮಾಡಿದವು. ಸಹಿ ಮಾಡದ ಪ್ರಮುಖ ದೇಶಗಳೆಂದರೆ

UniversalCoachingCentre



www.shikarat.com

ಜರ್ಮನಿ, ನೆದರ್ಲೆಂಡ್ಸ್ ಮತ್ತು ಅಮೆರಿಕ. ವೇಶ್ಯಾವಾಟಿಕೆ ಎನ್ನುವುದು ದೀರ್ಘಕಾಲದ ಸಮಸ್ಯೆ ಮತ್ತು ವಿವಾದ. ಎರಡೂ ಪಕ್ಷಗಳು ಕೂಡಾ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವ ವಾದ ಸರಣಿಯನ್ನು ಮುಂದಿಡುತ್ತವೆ.

ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸುವುದಕ್ಕೆ ವಿರೋಧ ವ್ಯಕ್ತಪಡಿಸುವವರಿಂದ ಚರ್ಚೆ ಆರಂಭಿಸಿದರೆ, ಅವರ ವಾದದಲ್ಲಿ ಮಹಳಷ್ಟು ಮಹತ್ವದ ಅಂಶಗಳಿವೆ. ವೇಶ್ಯಾವಾಟಿಕೆಯನ್ನು ಅನೈತಿಕ ಚಟುವಟಿಕೆ ಎಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಅಮೆರಿಕದಲ್ಲಿ ಇದು ಕಾನೂನುಬಾಹಿರ. ನೈತಿಕತೆಯ ಪರಿಕಲ್ಪನೆಯನ್ನು ವಿರೋಧಿಸುವವರು, ಸರ್ಕಾರದ ಕೆಲಸ ನೈತಿಕತೆಯ ಬಗ್ಗೆ ಕಾನೂನು ತರುವುದಲ್ಲ ಎಂದು ವಾದಿಸುತ್ತಾರೆ. ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸುವುದು ಹಾಗೂ ಅಪರಾಧವಲ್ಲ ಎಂದು ಪರಿಗಣಿಸುವುದರ ವಿರುದ್ಧದ ಇನ್ನೊಂದು ವಾದವೆಂದರೆ, ಇದು ಕಲಬೆರಕೆಯನ್ನು ಹರಡುತ್ತದೆ ಎನ್ನುವುದು. ಆದರೆ ಈ ವಾದದ ವಿರೋಧಿಗಳು ಪ್ರತ್ಯುತ್ತರ ನೀಡುತ್ತಾರೆ. ಇಂಥ ಕಲಬೆರಕೆ ಅಥವಾ ಮಾಲಿನ್ಯ ನಡೆಯುವುದು ಕಾನೂನುಬಾಹಿರ ವೇಶ್ಯಾವಾಟಿಕೆಯಲ್ಲಿ ಎನ್ನುವುದು ಅವರ ವಾದ. ವೇಶ್ಯಾವಾಟಿಕೆಯನ್ನು ಕಾನೂನಬದ್ಧಗೊಳಿಸುವುದರ ವಿರುದ್ಧದ ಇನ್ನೊಂದು ವಾದವೆಂದರೆ, ಇದು ಅನಿವಾರ್ಯವಾಗಿ ಕೆಲವರನ್ನು ಸಂತ್ರಸ್ತರನ್ನಾಗಿ ಮಾಡುತ್ತದೆ ಎನ್ನುವುದು. ಉದಾಹರಣೆಗೆ ಎಳೆಯ ಮಕ್ಕಳು ಮನೆಯಿಂದ ಓಡಿಹೋದ ಸಂದರ್ಭದಲ್ಲಿ ಹಣ ಅನಿವಾರ್ಯವಾಗುತ್ತದೆ. ವೇಶ್ಯಾವಾಟಿಕೆಯ ವಿಷಯತಜ್ಞರೊಬ್ಬರ ಅಭಿಪ್ರಾಯದಂತೆ, "ಯೂರೋಪ್‌ನಲ್ಲಿ ಸದ್ಯಕ್ಕೆ ಇರುವ ವೇಶ್ಯಾವಾಟಿಕೆ ಅನುಪಾತ ಮಾನವ ಹಕ್ಕುಗಳ ಜಾಗತಿಕ ಗುಣಮಟ್ಟವನ್ನು ಹೊಂದಿಲ್ಲ. ಇಂಥ ತಜ್ಞರು ಹಾಗೂ ವೇಶ್ಯಾವಾಟಿಕೆ ಕಾನೂನುಬದ್ಧಗೊಳಿಸುವುದನ್ನು ವಿರೋಧಿಸುವ ಹೋರಾಟಗಾರರು ಹೇಳುವಂತೆ, ಬೇಡಿಕೆ ಹೆಚ್ಚಿದಂತೆ ಲೈಂಗಿಕ ಅಪರಾಧಗಳು ಕೂಡಾ ಹೆಚ್ಚುವ ಅಪಾಯವಿದೆ. ಇದೇ ಲೇಖಕ ಅಭಿಪ್ರಾಯಪಡುವಂತೆ ವೇಶ್ಯಾವಾಟಿಕೆಯನ್ನು ಇದೀಗ ಮಹಿಳೆಯರ ವಿರುದ್ಧದ ಹಿಂಸೆ ಎಂದು ವರ್ಗೀಕರಣ ಮಾಡಬೇಕು. ಭವಿಷ್ಯದ ಎಲ್ಲ ಕಾನೂನುಗಳು ಕೂಡಾ ಈ ಚೌಕಟ್ಟಿನಲ್ಲೇ ರೂಪುಗೊಳ್ಳಬೇಕು. ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಿದ ನೆವಡ ಮತ್ತು ಆಸ್ಟ್ರೇಲಿಯಾಗಳಲ್ಲಿ ವೇಶ್ಯೆಯರು ಹೆಚ್ಚಿನ ಸ್ವಾಯತ್ತತೆಯನ್ನೇನೂ ಪಡೆದಿಲ್ಲ. ಅಥವಾ ಪಿಂಪ್‌ಗಳ ಶೋಷಣೆಯಿಂದ ರಕ್ಷಣೆಯನ್ನೂ ಪಡೆದಿಲ್ಲ. ನೆದರ್ಲೆಂಡ್ಸ್‌ನಲ್ಲಿ ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಿರುವುದರಿಂದ, ಸಂಘಟಿತ ಅಪರಾಧಗಳು, ಮಹಿಳೆಯರ ಕಳ್ಳಸಾಗಣೆಯಂಥ ಕೃತ್ಯಗಳು ಎಲ್ಲೆ ಮೀರಿವೆ. ಇದು ಅತ್ಯಂತ ಲಾಭದಾಯಕ ದಂಧೆಯಾಗಿಯೂ ಮಾರ್ಪಟ್ಟಿದೆ.

ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಬೇಕು ಎಂಬ ವಾದ ಕೂಡಾ ಗಟ್ಟಿಯಾಗಿ ಕೇಳಿಬರುತ್ತಿದೆ. ಇದರ ಪ್ರತಿಪಾದಕರು ಮೋಹಕ ವಾದವನ್ನು ಮುಂದಿಡುತ್ತಾರೆ. ವೇಶ್ಯಾವಾಟಿಕೆ ವಿರೋಧಿ ಗುಂಪುಗಳು ಎತ್ತುವ ಪ್ರಶ್ನೆಗಳಿಗೆ ನಾಜೂಕಿನ ಉತ್ತರಗಳನ್ನು ನೀಡುತ್ತಾರೆ. ಉದಾಹರಣೆಗೆ ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಬೇಕು ಎಂದು ಪ್ರತಿಪಾದಿಸುವವರ ಪ್ರಕಾರ ನೆವಾಡ ನಿರ್ದಶನ ಒಂದು ಯಶೋಗಾಥೆ. ಇಲ್ಲಿ 1986ರಲ್ಲೇ ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಿರುವುದರಿಂದ, ದೇಶದ ವೇಶ್ಯೆಯರ ಎಚ್‌ಐವಿ ಪರೀಕ್ಷೆ ನಡೆಸಿದಾಗ, ಎಲ್ಲ ಋಣಾತ್ಮಕ ಫಲಿತಾಂಶ ಬಂದಿದೆ. ನೆವಾಡ ಆರೋಗ್ಯ ವಿಭಾಗದ ಬ್ಯೂರೊ ಆಫ್ ಡಿಸೀಸ್ ಕಂಟ್ರೋಲ್ ಅಂಡ್ ಇಂಟರ್ವೆನ್ಷನ್ ಸರ್ವಿಸಸ್ ಮುಖ್ಯಸ್ಥ ರಂಡಾಲ್ ಟಾಡ್ ಹೇಳುವಂತೆ, "1980ರ ದಶಕದಲ್ಲಿ ನಡೆಸಿದ ಅಧ್ಯಯನಗಳ ವರದಿಯನ್ನು ಒಗ್ಗೂಡಿಸಿದರೆ, ಒಬ್ಬಾಕೆ ವೇಶ್ಯೆಯನ್ನು ಬಂಧಿಸಲು ಸರಾಸರಿ ಸಾರ್ವಜನಿಕರ ತೆರಿಗೆ ಹಣ ಸುಮಾರು ಎರಡು ಸಾವಿರ ಡಾಲರ್‌ನ್ನು ವೆಚ್ಚವಾಗುತ್ತಿತ್ತು. ಆ ಅವಧಿಯಲ್ಲಿ ಅದು ದೊಡ್ಡ ಮೊತ್ತ. ಆದರೆ ಇಂದು ಇಡೀ ಅಮೆರಿಕದ ನಗರಗಳಲ್ಲಿ ವೇಶ್ಯಾವಾಟಿಕೆ ಕಾನೂನು ಜಾರಿಯ ವೆಚ್ಚ ವರ್ಷಕ್ಕೆ 75 ಲಕ್ಷ ಡಾಲರ್. ನ್ಯೂಯಾರ್ಕ್ ಪಟ್ಟಣ ಕಾನೂನುಬಾಹಿರ ವೇಶ್ಯಾವಾಟಿಕೆಯನ್ನು ನಿಯಂತ್ರಿಸಲು ವಾರ್ಷಿಕ 23 ದಶಲಕ್ಷ ಡಾಲರ್ ಖರ್ಚು ಮಾಡುತ್ತಿದೆ. ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸುವ ಕ್ರಮದಿಂದ ಸರ್ಕಾರದ ವೆಚ್ಚ ಕಡಿಮೆಯಾಗುವುದು ಮಾತ್ರವಲ್ಲದೇ, ಇದು ಹೊಸ ಶುಲ್ಕದ ಮೂಲಕ ಆದಾಯವನ್ನೂ ತಂದುಕೊಡುತ್ತದೆ. ವೇಶ್ಯಾವಾಟಿಕೆಯ ಮೇಲೆ ವಿಧಿಸುವ ಶುಲ್ಕವನ್ನು ಇಲ್ಲಿ ಪಾಪದ ತೆರಿಗೆ ಎಂದು ಕರೆಯಲಾಗುತ್ತದೆ. ಆದರೆ ಇದರ ವಿರೋಧಿಗಳು, ವೇಶ್ಯಾವಾಟಿಕೆ ಕಾನೂನುಬದ್ಧಗೊಳಿಸುವುದು ತೀರಾ ಅಪಾಯಕಾರಿ ನಿರ್ಧಾರ ಎನ್ನುತ್ತಾರೆ. ಇವರ ವಾದದ ಪ್ರಕಾರ, ವಾಸ್ತವವಾಗಿ, ಜನ ಧರ್ಮ, ರಾಜಕೀಯ ಮತ್ತು ಶಿಕ್ಷಣವನ್ನು ಯಾವಾಗಲೂ ಮಾರಾಟ ಮಾಡುತ್ತಾರೆ. ಇತರರು ಅದನ್ನು ಯಾವ ಸಮಸ್ಯೆಯೂ ಇಲ್ಲದೇ ಖರೀದಿಸುತ್ತಾರೆ. ಏಕೈಕ ಉತ್ಪನ್ನವೆಂದರೆ ಅದು ನಿಮ್ಮ ದೇಹ, ಅದು ನಿಮ್ಮ ಆಸ್ತಿ. ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು.

ಎರಡೂ ಪಕ್ಷಗಳ ವಾದದಲ್ಲೂ ಕೆಲ ಸತ್ಯಾಂಶಗಳಿವೆ. ಆದ್ದರಿಂದ ವೇಶ್ಯಾವಾಟಿಕೆಯ ಕಾನೂನುಬದ್ಧತೆ ಬಗ್ಗೆ ಚರ್ಚೆ ಮುಂದುವರಿಯುತ್ತಲೇ ಇರುತ್ತದೆ. ಸದ್ಯೋಭವಿಷ್ಯದಲ್ಲಿ ನೀತಿನಿಯಮಗಳಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಾರದಿದ್ದರೆ, ವೇಶ್ಯಾವಾಟಿಕೆಯ ಅಪರಾಧೀಕರಣವೂ ಮುಂದುವರಿಯುವುದು ಖಚಿತ. ಆ ಬದಲಾವಣೆ ಆಗುವವರೆಗೂ, ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಬೇಕು ಎಂಬ ವಾದ ಮುಂದುವರಿಯತ್ತದೆ. ಇದು ಅನಾದಿಕಾಲದಿಂದ ನಡೆದುಕೊಂಡು ಬಂದಂತೆ ಹೇಗಾದರೂ ಮುಂದುವರಿಯುತ್ತದೆ.

ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ, ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸುವುದು ತಕ್ಷಣದ ಅಗತ್ಯ. ಒಮ್ಮೆ ಸುಪ್ರೀಂಕೋರ್ಟ್ ಕೂಡಾ, ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸುವಂತೆ ಸಲಹೆ ಮಾಡಿತ್ತು. ಇಂಥ ಕ್ರಮ ಎಚ್‌ಐವಿ ಪೀಡೆ ನಿಯಂತ್ರಿಸುವಲ್ಲಿ ಮಹತ್ವದ ಹೆಜ್ಜೆಯಾಗಬಹುದು. ಸದ್ಯದ ಪರಿಸ್ಥಿತಿಯಲ್ಲಿ ಬಹುತೇಕ ಎಲ್ಲರೂ, ವೇಶ್ಯಾಗೃಹಗಳಿಗೆ ಭೇಟಿ ನೀಡಿದ ವಿಚಾರವನ್ನು ಮುಚ್ಚಿಡುತ್ತಾರೆ. ಇದು ಒಂದು ವೇಳೆ ಮುಕ್ತ ವಿಷಯವಾದಾಗ, ಮದುವೆಯ ಪಾಲುದಾರರು, ತಮ್ಮ ಸ್ವಂತ ನಡವಳಿಕೆಯನ್ನು ವಿಮರ್ಶಿಸತೊಡಗುತ್ತಾರೆ. ಇಂಥ ಕ್ರಮ ಖಂಡಿತವಾಗಿಯೂ ಅತ್ಯಾಚಾರದಂಥ ಪ್ರಕರಣಗಳು ಕಡಿಮೆಯಾಗಲು ಕಾರಣವಾಗಬಹುದು. ಹಾಗೂ ಸಮಾಜದಲ್ಲಿ ಇತರ ಅಪರಾಧಗಳು ಕಡಿಮೆಯಾಗಲೂ ಕಾರಣವಾಗಬಹುದು.

## 29. ಶಿಕ್ಷಣದ ಹಕ್ಕು

ವಿದ್ಯಾಹೀನಂ ಪಶುಸಮಾನಂ ಎಂಬ ನಾಣ್ನುಡಿ ಇದೆ. ಅಂದರೆ ಅಕ್ಷರಜ್ಞಾನವಿಲ್ಲದ ಮನುಷ್ಯನ ಬದುಕು ಪ್ರಾಣಿಗಳಿಗೆ ಸಮಾನ ಎನ್ನುವುದು ಅರ್ಥ. ಶಿಕ್ಷಣವು ಮನುಷ್ಯನನ್ನು ಮಾನವನನ್ನಾಗಿ ರೂಪುಗೊಳಿಸುತ್ತದೆ ಮತ್ತು ಜ್ಞಾನದ ಮಾರ್ಗವನ್ನು ಕಂಡುಕೊಳ್ಳಲು ಮತ್ತು ಅಜ್ಞಾನದಿಂದ ಮುಕ್ತಿ ಪಡೆಯುವ ಮಾರ್ಗವಾಗಿ ಇದು ಕಾರ್ಯ ನಿರ್ವಹಿಸುತ್ತದೆ.


www.shikarat.com

ಶಿಕ್ಷಣವು ನಿರಂತರ ಅಭಿವೃದ್ಧಿಯ ಪ್ರಕ್ರಿಯೆಯನ್ನು ರೂಢಿಸಿಕೊಳ್ಳುವ ಮತ್ತು ಮನುಷ್ಯನ ಸ್ವಾಭಾವಿಕ ಬಲವನ್ನು ಅಂತರ್ಗತ ಮಾಡಿಕೊಳ್ಳಬಹುದಾದ ಮಾರ್ಗ. ಮಾನವನ ಕಲ್ಯಾಣಕ್ಕೆ ಶಿಕ್ಷಣ ಅತ್ಯಂತ ಪ್ರಭಾವಿ ಹಾಗೂ ಅನಿವಾರ್ಯ ಮಾಧ್ಯಮ. ಇದು ಪ್ರತಿ ವ್ಯಕ್ತಿಯ ವೈಯಕ್ತಿಕ ಇಮೇಜ್ ಹಾಗೂ ಜ್ಞಾನದ ಹರವನ್ನು ಹೆಚ್ಚಿಸುತ್ತದೆ. ಈ ಅಂಶ ಸಹಜವಾಗಿಯೇ ಮನುಷ್ಯನ ಯಶಸ್ಸು ಹಾಗೂ ಸಂತೋಷದ ಮಾರ್ಗವನ್ನು ತೋರಿಸಿಕೊಡುತ್ತದೆ. ಶಿಕ್ಷಣ ಸಹಜವಾಗಿಯೇ ಉತ್ತಮ ನಾಗರೀಕತೆಯ ಅಥವಾ ಉತ್ತಮ ಪ್ರಜೆಯಾಗಿ ಬಾಳಲು ಅಗತ್ಯವಾದ ಮೂಲಭೂತ ಅಂಶ. ಮಕ್ಕಳಿಗೆ ಸಾಂಸ್ಕೃತಿಕ ಮೌಲ್ಯವನ್ನು ಪರಿಚಯಿಸಲು, ಮಗು ಭವಿಷ್ಯದಲ್ಲಿ ವೃತ್ತಿ ತರಬೇತಿ ಪಡೆಯಲು ಮತ್ತು ಮಗು ಸಾಮಾನ್ಯವಾಗಿ ತನ್ನ ವಾತಾವರಣಕ್ಕೆ ಹೊಂದಿಕೊಳ್ಳಲು ಸಹಕಾರ ನೀಡುವಲ್ಲಿ ಶಿಕ್ಷಣ ಪ್ರಮುಖ ಅಸ್ತ್ರ. ಶಿಕ್ಷಣದ ಕಾರಣದಿಂದಲೇ ಮಕ್ಕಳನ್ನು ದೇಶದ ಭವಿಷ್ಯ ಎಂದು ಕರೆಯಲಾಗುತ್ತದೆ.

ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟಗಳೆರಡರಲ್ಲೂ ಹೆಚ್ಚು ಹೆಚ್ಚು ಜನತೆಯನ್ನು ಹೆಚ್ಚು ಸುಶಿಕ್ಷಿತರಾಗಿ ಮಾಡಲು ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಶಿಕ್ಷಣವು ಸಮಾಜದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುವುದರಿಂದ, ಮಾನವನ ಗೌರವವನ್ನು ಹೆಚ್ಚಿಸಲು ಇದು ಪೂರಕವಾಗಿರುವುದರಿಂದ ವಿಶ್ವಸಂಸ್ಥೆಯು 1948ರ ಡಿಸೆಂಬರ್ 10ರಂದು ಮಾನವಹಕ್ಕುಗಳ ಜಾಗತಿಕ ಘೋಷಣೆಗಳನ್ನು ಜಾರಿಗೆ ತಂದಿತು. ಮಾನವಹಕ್ಕುಗಳ ಜಾಗತಿಕ ಘೋಷಣೆಯ ಪೀಠಿಕೆಯಲ್ಲಿ, ಪ್ರತಿ ವ್ಯಕ್ತಿ ಕೂಡಾ ಸಮಾಜದ ಅವಿಭಾಜ್ಯ ಅಂಗ. ಇವರ ಗೌರವ ಮತ್ತು ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಶಿಕ್ಷಣಕ್ಕೆ ಒತ್ತು ನೀಡಬೇಕಾದ್ದು ಅನಿವಾರ್ಯ. ಇದು ಅವರ ಸ್ವಾತಂತ್ರ್ಯದ ಅಸ್ತ್ರವೂ ಹೌದು. ಮಾನವಹಕ್ಕುಗಳ ಜಾಗತಿಕ ಘೋಷಣೆಗಳ ಪೀಠಿಕೆಯ ಅನ್ವಯ, ಶಿಕ್ಷಣ ಮಾನವಹಕ್ಕುಗಳನ್ನು ಉತ್ತೇಜಿಸಬೇಕು. ಇದಕ್ಕೆ ಅವರಿಗೆ ಜ್ಞಾನ ಮತ್ತು ಕೌಶಲವನ್ನು ಒದಗಿಸಲು ಸರ್ಕಾರಗಳು ಒತ್ತು ನೀಡಬೇಕು.

ಅನಕ್ಷರತೆಯಿಂದ ಹಲವು ವ್ಯತಿರಿಕ್ತ ಪರಿಣಾಮಗಳಿವೆ. ಪ್ರಜಾಪ್ರಭುತ್ವದಲ್ಲಿ ಕಾನೂನು ಕಟ್ಟಳೆಗಳೇ ಪ್ರಮುಖವಾಗಿರುವುದರಿಂದ ಅನಕ್ಷರಸ್ಥರು ಇವುಗಳ ಅರಿವು ಹೊಂದಿರದಿದ್ದರೆ ಶೋಷಣೆಗೆ ಒಳಗಾಗುವ ಅಪಾಯವಿರುತ್ತದೆ. ಸುಶಿಕ್ಷಿತ ವ್ಯಕ್ತಿಗಳು ತಮ್ಮ ರಾಜಕೀಯ ಹಕ್ಕುಗಳನ್ನು ಪ್ರಜ್ಞಾಪೂರ್ವಕವಾಗಿ ಚಲಾಯಿಸಲು, ತಮ್ಮ ಸಾಮಾಜಿಕ ಜವಾಬ್ದಾರಿಗಳನ್ನು ಹೆಚ್ಚು ಸಮರ್ಥವಾಗಿ ನಿಭಾಯಿಸಲು, ಸಹನೆ ಮತ್ತು ಸುಧಾರಣೆಯ ಅಂಶಗಳನ್ನು ಅರ್ಥೈಸಿಕೊಳ್ಳಲು ಇದು ಅನಿವಾರ್ಯವಾಗುತ್ತದೆ. ಆದ್ದರಿಂದ ಪ್ರಜಾಪ್ರಭುತ್ವ ಭದ್ರವಾಗಿ ಉಳಿಯಲು ಮತ್ತು ಪ್ರಜಾಪ್ರಭುಂತ್ವದ ಅಭಿವೃದ್ಧಿಗೆ ಶಿಕ್ಷಣ ಅನಿಯವಾರ್ಯ.

ವಿಶ್ವಸಂಸ್ಥೆಯು ಮಕ್ಕಳ ಶಿಕ್ಷಣದ ಹಕ್ಕನ್ನು ಮಾನವಹಕ್ಕು ಎಂದು ಪರಿಗಣಿಸಿದೆ. ಎಲ್ಲ ದೇಶಗಳು ಪ್ರಾಥಮಿಕ ಶಿಕ್ಷಣವನ್ನು ಉಚಿತ ಹಾಗೂ ಕಡ್ಡಾಯವಾಗಿ ನೀಡಲು ಅಗತ್ಯವಾದ ವ್ಯವಸ್ಥೆ ಮಾಡಿಕೊಳ್ಳುವಂತೆಯೂ ಸೂಚಿಸಿದೆ. ಎಲ್ಲ ಮಕ್ಕಳಿಗೂ ಪ್ರೌಢಶಿಕ್ಷಣ ಕೂಡಾ ಕೈಗೆಟುಕುವಂತೆ ಮಾಡುವುದು ಸರ್ಕಾರಗಳ ಜವಾಬ್ದಾರಿ. ಉನ್ನತ ಶಿಕ್ಷಣವು ಎಲ್ಲ ವರ್ಗದವರಿಗೂ ಕೈಗೆಟುಕುವ ವಾತಾವರಣವನ್ನು ಸೃಷ್ಟಿಸಬೇಕು. ಪ್ರಾಥಮಿಕ ಶಿಕ್ಷಣ ಪೂರೈಸಿದ ಪ್ರತಿಯೊಬ್ಬರಿಗೂ ಮೂಲಭೂತ ಶಿಕ್ಷಣವನ್ನು ನೀಡುವುದು ಕಡ್ಡಾಯ ಎಂದು ವಿಶ್ವಸಂಸ್ಥೆ ಸ್ಪಷ್ಟಪಡಿಸಿದೆ.

ಸುಮಾರು ನೂರು ವರ್ಷಗಳ ಹಿಂದೆ ಗೋಪಾಲಕೃಷ್ಣ ಗೋಖಲೆಯಂಥ ಹಲವು ಮಂದಿ ಸಮಾಜ ಸುಧಾರಕರು ಬ್ರಿಟಿಷ್ ವಶದಲ್ಲಿದ್ದ ಶಾಸನಸಭೆಯಲ್ಲಿ, ಭಾರತೀಯ ಜನರಿಗೆ ಶಿಕ್ಷಣದ ಹಕ್ಕನ್ನು ನೀಡುವಂತೆ ಒತ್ತಾಯಿಸಿದ್ದರು. ಆ ಗುರಿ ಒಂದು ಶತಮಾನದ ಬಳಿಕ ಈಡೇರಿದೆ. ಎಲ್ಲ ಅಡೆತಡೆಗಳನ್ನೂ ನಿವಾರಿಸಿ ಸರ್ಕಾರ ಅಂತಿಮವಾಗಿ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ)ಯನ್ನು 2010ರ ಏಪ್ರಿಲ್ ಒಂದರಂದು ದೇಶಾದ್ಯಂತ ಜಾರಿಗೆ ತಂದಿದೆ. ಇದೀಗ ಶಿಕ್ಷಣದ ಹಕ್ಕು ಪ್ರತಿಯೊಂದು ಮಗುವಿನ ಮೂಲಭೂತ ಹಕ್ಕು. ಆರರಿಂದ ಹದಿನಾಲ್ಕು ವರ್ಷದವರೆಗೆ ಮಗುವಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ ನೀಡುವುದು ಸರ್ಕಾರದ ಕರ್ತವ್ಯ. ಅಂದರೆ ಎಲ್ಲ ಮಕ್ಕಳಿಗೆ ಎಂಟನೇ ತರಗತಿಯವರೆಗೆ ಉಚಿತ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿ. ಯಾವುದೇ ವರ್ಗ ಅಥವಾ ಲಿಂಗಭೇದವಿಲ್ಲದೇ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಈ ಮೂಲಕ ಪ್ರಬಲ, ಸುಶಿಕ್ಷಿತ ಹಾಗೂ ಸಶಕ್ತ ಯುವಪಡೆಯನ್ನು ದೇಶದಲ್ಲಿ ಸಜ್ಜುಗೊಳಿಸುವ ಬುನಾದಿ ಆರ್‌ಇಟಿ ಮೂಲಕ ಸಿದ್ಧವಾಗಿದೆ.

ವಿಶ್ವದಲ್ಲಿ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಿದ ವಿಶ್ವದ ಕೆಲವೇ ದೇಶಗಳಲ್ಲಿ ಭಾರತ ಕೂಡಾ ಒಂದು. ಈ ಕಾಯ್ದೆಯ ಅನ್ವಯ ಆರರಿಂದ ಹದಿನಾಲ್ಕು ವರ್ಷದವರೆಗಿನ ಎಲ್ಲ ಮಕ್ಕಳಿಗೆ ಶಿಕ್ಷಣದ ಅವಕಾಶವನ್ನು ಸರ್ಕಾರ ಸೃಷ್ಟಿಸಿಕೊಡುತ್ತದೆ. ಅಂದರೆ ಸುಮಾರು 22 ಕೋಟಿ ಮಕ್ಕಳ ಶಿಕ್ಷಣದ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ. ಈ ಪೈಕಿ 1.1 ಕೋಟಿ ಮಕ್ಕಳು ಶಾಲೆಗಳಿಂದ ಹೊರಗೆ ಉಳಿದಿದ್ದು, ಅವರನ್ನು ಮತ್ತೆ ಶಾಲೆಗಳಿಗೆ ಕರೆ ತರುವಂತೆ ಮನವೊಲಿಸುವುದು ಮತ್ತು ಉಚಿತವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು ಸರ್ಕಾರದ ಕರ್ತವ್ಯ.

ಭಾರತದ ಸಂವಿಧಾನ ಜಾರಿಗೆ ಬಂದ ಬಳಿಕ ಮೂಲಭೂತ ಹಕ್ಕನ್ನು ಸೇರಿಸಿದ್ದು ಇದೇ ಮೊದಲು. ಈ ಕಾಯ್ದೆಯ ಅನ್ವಯ ದೇಶದ ಪ್ರಾಥಮಿಕ ಶಿಕ್ಷಣದಲ್ಲಿ ಹಲವು ಕ್ರಾಂತಿಕಾರಿ ಬದಲಾವಣೆಗಳನ್ನು ಜಾರಿಗೆ ತರಲಾಗುತ್ತಿದೆ. ನೆರೆಯ ಶಾಲೆಯ ಪರಿಕಲ್ಪನೆ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಒಂದನೇ ತರಗತಿಯ ಪ್ರವೇಶದಲ್ಲಿ ಶೇಕಡ 25ರಷ್ಟು ಮೀಸಲಾತಿ ನೀಡುವ ಪ್ರಸ್ತಾಪ ಇಂಥ ಕೆಲ ಉತ್ತೇಜಕ ಕ್ರಮಗಳಾಗಿವೆ. ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವ  ಮತ್ತು ವಿದ್ಯಾರ್ಥಿ– ಶಿಕ್ಷಕ ಅನುಪಾತವನ್ನು ನಿರ್ಬಂಧಿಸುವ, ಶಿಕ್ಷಕರಿಗೆ ಸೂಕ್ತ ತರಬೇತಿಗಳನ್ನು ಆಯೋಜಿಸುವ ಬಗ್ಗೆಯೂ ಸರ್ಕಾರ ಗಮನ ಹರಿಸಿದೆ.

ಈ ಕಾಯ್ದೆಯಿಂದಾಗಿ ಶಾಲೆಗಳಿಂದ ಹೊರಗಿರುವ ಒಂದು ಕೋಟಿ ಮಕ್ಕಳನ್ನು ಮತ್ತೆ ಶಿಕ್ಷಣದ ತೆಕ್ಕೆಗೆ ಕರೆತರಲು ಕೂಡಾ ಅನುವಾಗಲಿದೆ. ಆದರೆ ಇದರ ಪರಿಣಾಮಕಾರಿ ಅನುಷ್ಠಾನ ಮಾತ್ರ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ. ಸರ್ಕಾರ ಇದಕ್ಕಾಗಿ ಆರು ತಿಂಗಳ ಒಳಗಾಗಿ ಹನ್ನೆರಡು ಲಕ್ಷ ಶಿಕ್ಷಕರನ್ನು ನೇಮಕ ಮಾಡುವ ಅಗತ್ಯವಿದ್ದು, ಮುಂದಿನ ಐದು ವರ್ಷದ ಒಳಗಾಗಿ ಅವರಿಗೆ ಸೂಕ್ತ ತರಬೇತಿಯನ್ನೂ ನೀಡಬೇಕಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಹೊರೆಯ 55:45 ಅನುಪಾತವನ್ನು ಹೊರಲು ಒಪ್ಪಿಕೊಂಡಿವೆ. ಹಣಕಾಸು ಆಯೋಗವು ಈ ಕಾಯ್ದೆಯ ಅನುಷ್ಠಾನದ ಉದ್ದೇಶಕ್ಕಾಗಿ 25 ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರಗಳಿಗೆ ನೀಡಿದೆ. ಕೇಂದ್ರ ಸರ್ಕಾರವು 2010–11ನೇ ಸಾಲಿನಲ್ಲಿ 15 ಸಾವಿರ ಕೋಟಿ ರೂಪಾಯಿಗಳನ್ನು ಈ ಉದ್ದೇಶಕ್ಕೆ ಮೀಸಲಿಟ್ಟಿದೆ.



www.shikarat.com

UniversalCoachingCentre

ಶಿಕ್ಷಣ ಹಕ್ಕು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಇರುವ ಸವಾಲುಗಳು ಮತ್ತು ಟೀಕೆಗಳ ನಡುವೆಯೂ, ಈ ಕಾಯ್ದೆಯು ಭಾರತದಲ್ಲಿರುವ ಆರರಿಂದ ಹದಿನಾಲ್ಕು ವರ್ಷದವರೆಗಿನ ಪ್ರತಿ ಮಕ್ಕಳು ಕೂಡಾ ಶಿಕ್ಷಣ ಪಡೆಯುವ ಹಕ್ಕನ್ನು ಸರ್ಕಾರದ ಮುಂದೆ ಪ್ರತಿಪಾದಿಸುವ ಅಧಿಕಾರವನ್ನು ಈ ಕಾಯ್ದೆ ಕಲ್ಪಿಸಿಕೊಟ್ಟಿದೆ. ದೇಶದಲ್ಲಿ ಬಹುತೇಕ ಕುಟುಂಬಗಳು ಕಡಿಮೆ ಆದಾಯ ಹೊಂದಿದ್ದು, ಪ್ರಾಥಮಿಕ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ನೀಡುವ ಸ್ಥಿತಿಯಲ್ಲೂ ಇಲ್ಲ. ಈ ಹಿನ್ನೆಲೆಯಲ್ಲಿ ಶಿಕ್ಷಣ ಹಕ್ಕು ಕಾಯ್ದೆ ಕ್ರಾಂತಿಕಾರಿ ಬದಲಾವಣೆಗೆ ಕಾರಣವಾಗಲಿದೆ.

ದಲಿತರು, ಅಲ್ಪಸಂಖ್ಯಾತರು ಮತ್ತು ಹೆಣ್ಣುಮಕ್ಕಳಿಗೆ ಸಂಪೂರ್ಣವಾಗಿ ಶಿಕ್ಷಣ ನೀಡುವುದು ನಮ್ಮ ಗುರಿ ಎಂದು ಪ್ರಧಾನಿ ಸ್ಪಷ್ಟಪಡಿಸಿದ್ದಾರೆ. ಪ್ರಧಾನಿಯವರ ಪ್ರಕಾರ, "ಪ್ರತಿ ಭಾರತೀಯ ವ್ಯಕ್ತಿ ಕೂಡಾ ಭವ್ಯ ಭವಿಷ್ಯದ ಕನಸು ಕಾಣಬೇಕು; ಮತ್ತು ಈ ಕನಸು ಜೀವಂತವಾಗಿರುವಂತೆ ನೋಡಿಕೊಳ್ಳಬೇಕು" ಎಂದು ಕಾಯ್ದೆ ಅನುಷ್ಠಾನಕ್ಕೆ ತರುವ ವೇಳೆ ಪ್ರಧಾನಿಯಾಗಿದ್ದ ಡಾ.ಮನಮೋಹನ ಸಿಂಗ್, ಪ್ರತಿಯೊಬ್ಬರನ್ನೂ ಸುಶಿಕ್ಷಿತರನ್ನಾಗಿ ಮಾಡುವ ಬದ್ಧತೆಯನ್ನು ಸ್ಪಷ್ಟಪಡಿಸಿದ್ದರು. ಈ ಗುರಿ ತಲುಪುವಂತೆ ಮಾಡುವುದು ಇದೀಗ ನಮ್ಮ ಕೈಯಲ್ಲಿದೆ. ಶಿಕ್ಷಣವು ರಾಜ್ಯಪಟ್ಟಿಯಲ್ಲಿ ಸೇರಿರುವುದರಿಂದ ಪ್ರತಿ ಹಂತದಲ್ಲೂ ಉತ್ತಮ ಸಹಕಾರ ನೀಡಿದಲ್ಲಿ ಮಾತ್ರ ಇದನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ಸಾಧ್ಯ.

ಈ ಕಾಯ್ದೆಯಲ್ಲಿ ಎದ್ದುಕಾಣುವ ಪ್ರಮುಖ ಲೋಪವೆಂದರೆ, ಐದುವರ್ಷಕ್ಕಿಂತ ಕೆಳಗಿನ ಮಕ್ಕಳ ಬಗ್ಗೆ ಕಾಯ್ದೆ ಗಮನ ಹರಿಸಿಲ್ಲ. ಈ ಹಿನ್ನೆಲೆಯಲ್ಲಿ ಐದು ವರ್ಷಕ್ಕಿಂತ ಕೆಳಗಿನ ಮಕ್ಕಳನ್ನೂ ಈ ಕಾಯ್ದೆಯ ವ್ಯಾಪ್ತಿಗೆ ತರುವ ನಿಟ್ಟಿನಲ್ಲಿ ಮತ್ತೊಮ್ಮೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕಾದ್ದು ಅಗತ್ಯ. ಏಕೆಂದರೆ, ಆರನೇ ವರ್ಷಕ್ಕೆ ಬರುವ ವೇಳೆಗೇ ಮಕ್ಕಳನ್ನು ಬಾಲಕಾರ್ಮಿಕ ಪದ್ಧತಿಯಂಥ ಅನಿಷ್ಟಕ್ಕೆ ತಳ್ಳುವ ಪರಿಸ್ಥಿತಿಯೂ ನಮ್ಮ ಸಮಾಜದಲ್ಲಿದೆ. ಇದಕ್ಕಿಂತ ಹೆಚ್ಚಾಗಿ ಕಾಯ್ದೆಯ ಅನ್ವಯ ಹದಿನಾಲ್ಕು ವರ್ಷದವರೆಗೆ ಮಾತ್ರ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿ. ಆದರೆ ಪ್ರೌಢಶಿಕ್ಷಣ ಮತ್ತು ಉನ್ನತ ಶಿಕ್ಷಣ ಆಯಾ ರಾಜ್ಯದ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ಐಚ್ಛಿಕ ಹಾಗೂ ಷರತ್ತುಬದ್ಧ. ಆದರೆ ಸಮಾಜದ ಎಲ್ಲ ವರ್ಗದ ಮಕ್ಕಳಿಗೆ ಎಲ್ಲ ಹಂತದ ಶಿಕ್ಷಣ ಕೈಗೆಟುಕಿದರೆ ಮಾತ್ರ ಶಿಕ್ಷಣದ ಹಕ್ಕು ಹೆಚ್ಚು ಅರ್ಥಪೂರ್ಣವಾಗುತ್ತದೆ. ಇಲ್ಲದಿದ್ದರೆ ನಿಗದಿತ ಗುರಿಯ ಗುಂಪನ್ನು ಇದು ತಲುಪಲು ವಿಫಲವಾಗುತ್ತದೆ. ಇದರಿಂದಾಗಿ ನಮ್ಮ ಮುಖಂಡರು ಭಾರತೀಯ ಸಮಾಜವನ್ನು ಬೌದ್ಧಿಕ ಸಮಾಜವಾಗಿ ಅಭಿವೃದ್ಧಿಪಡಿಸಲು ಕಷ್ಟಸಾಧ್ಯ.

## 30. ನೋಟ: ಅಭ್ಯರ್ಥಿಯನ್ನು ತಿರಸ್ಕರಿಸುವ ಹಕ್ಕು

ಎಲೆಕ್ಟ್ರಾನಿಕ್ ವೋಟಿಂಗ್ ಮಿಷಿನ್‌ಗಳಲ್ಲಿ ನೋಟಾ ಆಯ್ಕೆಯನ್ನು ನೀಡಲು ಹೆಚ್ಚಿನ ಆರ್ಥಿಕ ಹೊರೆಯಾಗಲೀ, ಅಥವಾ ಸಾಫ್ಟ್‌ವೇರ್‌ನಲ್ಲಿ ಬದಲಾವಣೆಯಾಗಲೀ ಇಲ್ಲ ಎಂದು ಚುನಾವಣಾ ಆಯೋಗ ಸುಪ್ರೀಂಕೋರ್ಟ್‌ಗೆ ತಿಳಿಸಿದೆ. ಈ ನಿರ್ಧಾರದಿಂದ ಜನರು ಯಾವ ಅಭ್ಯರ್ಥಿಯ ಬಗ್ಗೆಯೂ ಸಮಾಧಾನ ಇಲ್ಲದಿದ್ದರೆ, ಎಲ್ಲ ಅಭ್ಯರ್ಥಿಗಳನ್ನೂ ತಿರಸ್ಕರಿಸಲು ಅವಕಾಶವಾಗುತ್ತದೆ. ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಎಂಬ ಸ್ವಯಂಸೇವಾ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಿ.ಸದಾಶಿವಂ ಅವರನ್ನೊಳಗೊಂಡ ನ್ಯಾಯಪೀಠವು, ಈ ಋಣಾತ್ಮಕ ಮತದಾನವು ಚುನಾವಣಾ ವ್ಯವಸ್ಥೆಗೆ ಹೊಸ ಹುರುಪು ಮತ್ತು ಪರಿಶುದ್ಧತೆಯನ್ನು ತಂದುಕೊಡುತ್ತದೆ ಎಂದು ಅಭಿಪ್ರಾಯಪಟ್ಟಿತ್ತು. ಇದರ ಜತೆಗೆ, ಇದು ಮತದಾರರು ಚುನಾವಣೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕೂಡಾ ಪೂರಕವಾಗುತ್ತದೆ. ಕಣದಲ್ಲಿರುವ ಯಾವ ಅಭ್ಯರ್ಥಿಯೂ ಸಮರ್ಪಕ ಎನಿಸದಿದ್ದರೂ, ಋಣಾತ್ಮಕ ಮತವನ್ನು ಚಲಾಯಿಸುವ ಸಲುವಾಗಿಯಾದರೂ, ಜನ ಮತದಾನದಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಅಭಿಪ್ರಾಯಪಟ್ಟಿತ್ತು. ರಂಜನಾ ಪ್ರಕಾಶ್ ದೇಸಾಯಿ ಮತ್ತು ರಂಜನಾ ಗೊಗೋಯ್ ಅವರನ್ನೊಳಗೊಂಡ ಪೀಠ ಅಭಿಪ್ರಾಯಪಟ್ಟಂತೆ, ಪ್ರಜಾಪ್ರಭುತ್ವಕ್ಕೆ ಉತ್ತೇಜನ ನೀಡುವ ಸಲುವಾಗಿ ಋಣಾತ್ಮಕ ಮತದಾನಕ್ಕೆ ಅವಕಾಶ ನೀಡಲಾಗುವುದು. ಜತೆಗೆ ಇದು ಎಲ್ಲ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ತಮ್ಮ ಬಗ್ಗೆ ಮತದಾರರ ಸಂದೇಶ ಏನು ಎನ್ನುವುದನ್ನು ತಿಳಿದುಕೊಳ್ಳಲು ಸ್ಪಷ್ಟ ಸಂದೇಶವನ್ನು ಸಾರಲು ನೆರವಾಗುತ್ತದೆ ಎಂದು ಸ್ಪಷ್ಟಪಡಿಸಿತ್ತು.

ಈ ಐತಿಹಾಸಿಕ ತೀರ್ಪಿನಲ್ಲಿ ಸುಪ್ರೀಂಕೋರ್ಟ್, ಎಲೆಕ್ಟ್ರಾನಿಕ್ ಮತಯಂತ್ರದಲ್ಲಿ ಮೇಲ್ಕಂಡ ಯಾರೂ ಅಲ್ಲ (ನೋಟಾ) ಎಂಬ ಪ್ರತ್ಯೇಕ ಗುಂಡಿಯನ್ನು ಅಳವಡಿಸುವಂತೆ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿತು. ಮತದಾನ ಪತ್ರದಲ್ಲೂ ಇದಕ್ಕೆ ಸಂಬಂಧಿಸಿದ ನಿರಾಕರಣೆ ಮತ ಚಲಾವಣೆಗೂ ಅವಕಾಶ ಕಲ್ಪಿಸುವಂತೆ ಆದೇಶ ನೀಡಿತು. ಬೆಂಗಳೂರು ಮೂಲದ ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸಂಸ್ಥೆ ಸಿದ್ಧಪಡಿಸಿದ ಮತಯಂತ್ರಗಳಲ್ಲಿ, ಹೊಸ ಆಯ್ಕೆಗೆ ಅವಕಾಶ ನೀಡಲು ಯಾವ ತಾಂತ್ರಿಕ ಬದಲಾವಣೆಯೂ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿತ್ತು. ಚುನಾವಣಾ ಆಯೋಗ ಕೂಡಾ ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಯಾವ ತಡೆಯೂ ಇಲ್ಲದೇ ಹೊಸ ನಿರ್ಧಾರವನ್ನು ಅಳವಡಿಸಿಕೊಳ್ಳಬಹುದು ಎಂದು ಸ್ಪಷ್ಟಪಡಿಸಿತ್ತು.

ಎಲೆಕ್ಟ್ರಾನಿಕ್ ವೋಟಿಂಗ್ ಮಿಷಿನ್‌ಗಳಲ್ಲಿ ನೋಟಾ ಆಯ್ಕೆಯನ್ನು ನೀಡಲು ಹೆಚ್ಚಿನ ಆರ್ಥಿಕ ಹೊರೆಯಾಗಲೀ, ಅಥವಾ ಸಾಫ್ಟ್‌ವೇರ್‌ನಲ್ಲಿ ಬದಲಾವಣೆಯಾಗಲೀ ಇಲ್ಲ ಎಂದು ಚುನಾವಣಾ ಆಯೋಗ ಸುಪ್ರೀಂಕೋರ್ಟ್‌ಗೆ ತಿಳಿಸಿದೆ. ಈ ನಿರ್ಧಾರದಿಂದ ಜನರು ಯಾವ ಅಭ್ಯರ್ಥಿಯ ಬಗ್ಗೆಯೂ ಸಮಾಧಾನ ಇಲ್ಲದಿದ್ದರೆ, ಎಲ್ಲ ಅಭ್ಯರ್ಥಿಗಳನ್ನೂ ತಿರಸ್ಕರಿಸಲು ಅವಕಾಶವಾಗುತ್ತದೆ. ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಎಂಬ ಸ್ವಯಂಸೇವಾ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಿ.ಸದಾಶಿವಂ ಅವರನ್ನೊಳಗೊಂಡ ನ್ಯಾಯಪೀಠವು, ಈ ಋಣಾತ್ಮಕ ಮತದಾನವು ಚುನಾವಣಾ ವ್ಯವಸ್ಥೆಗೆ ಹೊಸ ಹುರುಪು ಮತ್ತು ಪರಿಶುದ್ಧತೆಯನ್ನು ತಂದುಕೊಡುತ್ತದೆ ಎಂದು ಅಭಿಪ್ರಾಯಪಟ್ಟಿತ್ತು. ಇದರ ಜತೆಗೆ, ಇದು ಮತದಾರರು ಚುನಾವಣೆಯಲ್ಲಿ ಅಧಿಕ


www.shikarat.com

ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕೂಡಾ ಪೂರಕವಾಗುತ್ತದೆ. ಕಣದಲ್ಲಿರುವ ಯಾವ ಅಭ್ಯರ್ಥಿಯೂ ಸಮರ್ಪಕ ಎನಿಸದಿದ್ದರೂ, ಋಣಾತ್ಮಕ ಮತವನ್ನು ಚಲಾಯಿಸುವ ಸಲುವಾಗಿಯಾದರೂ, ಜನ ಮತದಾನದಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಅಭಿಪ್ರಾಯಪಟ್ಟಿತ್ತು. ರಂಜನಾ ಪ್ರಕಾಶ್ ದೇಸಾಯಿ ಮತ್ತು ರಂಜನಾ ಗೊಗೋಯ್ ಅವರನ್ನೊಳಗೊಂಡ ಪೀಠ ಅಭಿಪ್ರಾಯಪಟ್ಟಂತೆ, ಪ್ರಜಾಪ್ರಭುತ್ವಕ್ಕೆ ಉತ್ತೇಜನ ನೀಡುವ ಸಲುವಾಗಿ ಋಣಾತ್ಮಕ ಮತದಾನಕ್ಕೆ ಅವಕಾಶ ನೀಡಲಾಗುವುದು. ಜತೆಗೆ ಇದು ಎಲ್ಲ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ತಮ್ಮ ಬಗ್ಗೆ ಮತದಾರರ ಸಂದೇಶ ಏನು ಎನ್ನುವುದನ್ನು ತಿಳಿದುಕೊಳ್ಳಲು ಸ್ಪಷ್ಟ ಸಂದೇಶವನ್ನು ಸಾರಲು ನೆರವಾಗುತ್ತದೆ ಎಂದು ಸ್ಪಷ್ಟಪಡಿಸಿತ್ತು.

ಈ ನಿಟ್ಟಿನ ಕ್ರಮಕ್ಕೆ ಬೆಂಬಲವಾದ ಇನ್ನೊಂದು ಪ್ರಮುಖ ಅಂಶವೆಂದರೆ ಇದುವರೆಗೆ ಇದ್ದ ವ್ಯವಸ್ಥೆಯಲ್ಲಿ, ಮತದಾರರಿಗೆ ಎಲ್ಲ ಅಭ್ಯರ್ಥಿಗಳ ಬಗ್ಗೆ ಅಸಮಾಧಾನ ಇದ್ದಾಗ, ಮತದಾರರು ಸುಲಭವಾಗಿ ಋಣಾತ್ಮಕ ಮತ ಚಲಾಯಿಸುವ ಅವಕಾಶ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಹೊಸದಾಗಿ ಸುಲಭವಾಗಿ ನೋಟಾ ಚಲಾವಣೆಗೆ ಅವಕಾಶವಾಗುವಂಥ ಕ್ರಮವನ್ನು ಕಲ್ಪಿಸಬೇಕು ಎಂದು ಸ್ಪಷ್ಟಪಡಿಸಿತು. ಈ ಹೊಸ ಕ್ರಮವನ್ನು ಮುಂಬರುವ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಳಸಿಕೊಳ್ಳುವಂತೆಯೂ ಆದೇಶ ನೀಡಲಾಗಿತ್ತು.

ಸಂವಿಧಾನದ ಸೆಕ್ಷನ್ 19 (1) (ಎ) ಅನ್ವಯ ಭಾರತದ ಪ್ರತಿಯೊಬ್ಬ ಪ್ರಜೆಗೂ ತನ್ನ ಅಭಿವ್ಯಕ್ತಿಯನ್ನು ಸ್ವತಂತ್ರ್ಯವಾಗಿ ಮಾಡಲು ಅವಕಾಶವಿದೆ. ಆದರೆ ಒಬ್ಬ ವ್ಯಕ್ತಿಗೆ ಋಣಾತ್ಮಕ ಮತದಾನ ಮಾಡಲು ಅವಕಾಶ ನೀಡದಿರುವುದು, ಆತನ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ನಿರಾಕರಿಸಿದಂತಾಗುತ್ತದೆ. ಮತ್ತು ಸಂವಿಧಾನದ 21ನೇ ವಿಧಿಯಲ್ಲಿ ನೀಡಿರುವ ಸ್ವಾಯತ್ತತೆಯ ಸ್ವಾತಂತ್ರ್ಯವನ್ನು ನಿರಾಕರಿಸಿದಂತಾಗುತ್ತದೆ ಎಂದು ತೀರ್ಪಿನಲ್ಲಿ ಹೇಳಿತ್ತು. ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಸ್ವಯಂಸೇವಾ ಸಂಸ್ಥೆಯು, 2004ರಲ್ಲಿ ಸುಪ್ರೀಂಕೋರ್ಟಿನಲ್ಲಿ ಅರ್ಜಿ ಸಲ್ಲಿಸಿ, ಋಣಾತ್ಮಕ ಮತದಾನಕ್ಕೆ ಅವಕಾಶ ನೀಡುವಂತೆ ಮನವಿ ಮಾಡಿತ್ತು. ಇದು ಸುಪ್ರೀಂಕೋರ್ಟ್‌ನ ತೀರ್ಪನ್ನೇ ಉಲ್ಲೇಖಿಸಿ ವಾದ ಮಂಡಿಸಿತ್ತು. ಹಿರಿಯ ವಕೀಲ ರಾಜೇಂದ್ರ ಸಾಚಾರ್ ಮತ್ತು ಸಂಜಯ ಪಾರಿಖ್ ಅವರು ಅರ್ಜಿದಾರರ ಪರವಾಗಿ ವಾದ ಮಂಡಿಸಿದ್ದರು. ಈ ಅರ್ಜಿಯಲ್ಲಿ ಚುನಾವಣೆಯನ್ನು ನಿರ್ವಹಿಸುವ ಕಾಯ್ದೆ–1961ರ ಸೆಕ್ಷನ್ 41 (2) ಮತ್ತು (3) ಹಾಗೂ 49 (ಒ) ಸೆಕ್ಷನ್‌ನ ಸಂವಿಧಾನಬದ್ಧತೆಯನ್ನು ಪ್ರಶ್ನಿಸಿತ್ತು.

ಅವರ ವಾದದ ಪ್ರಕಾರ, ಈ ನಿಯಮಾವಳಿಯು ಮತದ ವರ್ಗೀಕರಣವನ್ನು ಉಲ್ಲಂಘಿಸಿದ್ದು, ಮುಕ್ತ ಹಾಗೂ ನ್ಯಾಯಸಮ್ಮತ ಮತದಾನಕ್ಕೆ ಈಗ ಇರುವ ಅವಕಾಶ ಪೂರಕವಾಗಿಲ್ಲ. ನೋಟಾ ಪ್ರಸ್ತಾವನೆ ಕಳೆದ ಹದಿನಾಲ್ಕು ವರ್ಷಗಳಿಂದ ಸರ್ಕಾರದ ಮುಂದಿದೆ. ಭಾರತದ ಕಾನೂನು ಆಯೋಗವು 1999ರ ಮೇ 29ರಂದು ನೋಟಾ ಬಗ್ಗೆ ಒಲವು ವ್ಯಕ್ತಪಡಿಸಿ, 170ನೇ ವರದಿಯಲ್ಲಿ ಈ ಬಗ್ಗೆ ಅಂದಿನ ಕಾನೂನು ಸಚಿವ ರಾಂ ಜೇಠ್ಮಲಾನಿ ಅವರಿಗೆ ಶಿಫಾರಸ್ಸು ಮಾಡಿತ್ತು. ಕೇಂದ್ರ ಸರ್ಕಾರ ಈ ಸಂಬಂಧ 1995ರ ನವೆಂಬರ್ 2ರಂದು ಚುನಾವಣಾ ಆಯುಕ್ತರ ಅಭಿಪ್ರಾಯ ಕೇಳಿತ್ತು. ಮಾಜಿ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಟಿ.ಎಸ್.ಕೃಷ್ಣಮೂರ್ತಿಯವರು, ಸರ್ಕಾರಕ್ಕೆ ಪದೇ ಪದೇ ಮನವಿ ಮಾಡಿ, ಈಗ ಇರುವ ಚುನಾವಣಾ ನಿಯಮಾವಳಿಗೆ ತಿದ್ದುಪಡಿ ತರುವಂತೆ ಒತ್ತಡ ಹೇರುತ್ತಲೇ ಬಂದಿದ್ದರು. ಈ ಮೂಲಕ ನೋಟಾ ಗುಂಡಿಯನ್ನು ಎಲೆಕ್ಟ್ರಾನಿಕ್ ಮತಯಂತ್ರದಲ್ಲಿ ಅಳವಡಿಸಲು ಆಗ್ರಹಿಸಿದ್ದರು. ನೋಟಾ ಅಳವಡಿಸುವುದಕ್ಕೆ ಕೇಂದ್ರ ಸರ್ಕಾರ ಸಲ್ಲಿಸಿದ್ದ ಆಕ್ಷೇಪಣೆಗಳನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿತ್ತು. ಇದು ನಾಗರಿಕರ ಮೂಲಭೂತ ಹಕ್ಕಲ್ಲ. ಕೇವಲ ಶಾಸನಬದ್ಧ ಹಕ್ಕು ಎಂಬ ಕಾರಣ ನೀಡಿ, ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ತಿರಸ್ಕರಿಸುವಂತೆ ಕೇಂದ್ರ ಸರ್ಕಾರ ವಾದ ಮಂಡಿಸಿತ್ತು.

ಚುನಾವಣಾ ಸುಧಾರಣೆಗಳ ಸಂಬಂಧ ಸುಪ್ರೀಂಕೋರ್ಟ್ ಹಲವು ಆದೇಶಗಳನ್ನು ನೀಡಿತ್ತು. ಇದರಲ್ಲಿ ಅಪರಾಧ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾದ ಸಂಸದರು ಮತ್ತು ಶಾಸಕರ ಅನರ್ಹತೆ, ಪೊಲೀಸ್ ಕಸ್ಟಡಿಯಲ್ಲಿರುವ ವ್ಯಕ್ತಿಗಳನ್ನು ಚುನಾವಣೆಗೆ ಸ್ಪರ್ಧಿಸಲು ಅವಕಾಶ ನಿರಾಕರಿಸುವುದು ಇದರಲ್ಲಿ ಮುಖ್ಯವಾದ ಅಂಶಗಳು. ಆದರೆ ಸುಪ್ರೀಂಕೋರ್ಟಿನ ನಿರ್ದೇಶನವನ್ನು ತಿರಸ್ಕರಿಸುವ ಸುಗ್ರೀವಾಜ್ಞೆಯನ್ನು ಸರ್ಕಾರ ಜಾರಿಗೊಳಿಸಿತು. ಇದರ ಅನ್ವಯ ಚುನಾವಣಾ ಕಾನೂನುಗಳು ಶಿಕ್ಷೆಗೆ ಒಳಗಾದ ಜನಪ್ರತಿನಿಧಿಗಳನ್ನು ತಕ್ಷಣ ಅನರ್ಹಗೊಳಿಸುವ ಅವಕಾಶವನ್ನು ಇದರಿಂದ ಕಿತ್ತುಹಾಕಿ ಸುಗ್ರೀವಾಜ್ಞೆ ಜಾರಿಗೊಳಿಸಲಾಗಿತ್ತು.

ಸುಪ್ರೀಂಕೋರ್ಟ್ ತೀರ್ಪಿನ ಪ್ರಮುಖ ಅಂಶಗಳೆಂದರೆ:

1. ಮತದಾರರ ಮತ ಪವಿತ್ರವಾಗಿರುವುದರಿಂದ, ಮತದಾರರು ಯಾವ ಅಭ್ಯರ್ಥಿಯ ಬಗ್ಗೆಯೂ ಸಮಾಧಾನ ಹೊಂದಿರದಿದ್ದರೆ, ಎಲ್ಲ ಅಭ್ಯರ್ಥಿಗಳನ್ನೂ ತಿರಸ್ಕರಿಸಲು ಅವಕಾಶ ಇರಬೇಕು.

2. ಋಣಾತ್ಮಕ ಮತದಾನವು ಚುನಾವಣಾ ಪ್ರಕ್ರಿಯೆಯಲ್ಲಿ ವ್ಯವಸ್ಥಿತ ಬದಲಾವಣೆಗೆ ಕಾರಣವಾಗಲಿದ್ದು, ಮತ್ತು ರಾಜಕೀಯ ಪಕ್ಷಗಳು, ಶುದ್ಧ ಚಾರಿತ್ರ್ಯದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಲಿದೆ.

3. ಈ ಹಿಂದೆ ಋಣಾತ್ಮಕ ಮತದಾನ ಮಾಡಬಯಸುವ ಮತದಾರರು ಮತದಾನ ಕೇಂದ್ರದಲ್ಲಿ ಒಂದು ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಕೊಡಬೇಕಿತ್ತು. ಈ ಅರ್ಜಿ ನಮೂನೆಯಲ್ಲಿ ಮತದಾರರ ಹೆಸರು ಮತ್ತು ಸಹಿ ಇದ್ದ ಕಾರಣ ಇದು ವ್ಯಕ್ತಿಯ ಮೂಲಭೂತ ಹಕ್ಕು ಎನಿಸಿದ ರಹಸ್ಯ ಮತದಾನದ ಹಕ್ಕಿಗೆ ವಿರುದ್ಧವಾಗಿತ್ತು.

4. ಸುಪ್ರೀಂಕೋರ್ಟ್ ಗಮನಿಸಿದಂತೆ, ಮತ ಚಲಾಯಿಸುವ ಅಥವಾ ಮತ ಚಲಾಯಿಸದಿರುವವರ ನಡುವೆ ಯಾವುದೇ ಭೇದಭಾವಕ್ಕೆ ಅವಕಾಶವಿಲ್ಲ. ಅಭ್ಯರ್ಥಿಯನ್ನು ತಿರಸ್ಕರಿಸುವುದು ಕೂಡಾ ಮೂಲಭೂತ ಹಕ್ಕಾದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲಿ ಬರುತ್ತದೆ.

5. ಮೇಲ್ಕಂಡ ಯಾರೂ ಅಲ್ಲ ಎಂಬ ಆಯ್ಕೆಯನ್ನು ಮಾನ್ಯ ಮಡುವುದು ಋಣಾತ್ಮಕ ಮತದಾನವಲ್ಲ. ಅದನ್ನು ಪ್ರಜಾಪ್ರಭುತ್ವದಲ್ಲಿ ಧನಾತ್ಮಕ ಮತದಾನ ಎಂದು ಪರಿಗಣಿಸಬೇಕು.



www.shikarat.com

6. ಎಲ್ಲ ಅಭ್ಯರ್ಥಿಗಳು ಸಮರ್ಥರಲ್ಲದಿದ್ದ ಪಕ್ಷದಲ್ಲಿ ಬಹುತೇಕ ಪ್ರಜ್ಞಾವಂತ ಮತದಾರರು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಹಿಂದೇಟು ಹಾಕುತ್ತಿದ್ದರು. ಇಂಥ ಅಭ್ಯರ್ಥಿಗಳಿಗೆ ಮತದಾನ ಮಾಡುವುದಕ್ಕಿಂತ ಮತದಾನ ಮಾಡದಿರುವುದೇ ಮೇಲು ಎಂಬ ನಿರ್ಧಾರಕ್ಕೆ ಬರುತ್ತಿದ್ದರು.

7. ಪ್ರಜಾಪ್ರಭುತ್ವ ಎನ್ನುವುದು ಆಯ್ಕೆಗೆ ಸಂಬಂಧಿಸಿದ್ದು. ಮತದಾರರ ಆಯ್ಕೆಯು ತಮ್ಮ ಇಚ್ಛೆಯನ್ನು ಅಭಿವ್ಯಕ್ತಿಪಡಿಸುವ ವಿಧಾನವಾಗಿರುತ್ತದೆ. ಆದ್ದರಿಂದ ಅವರ ಮುಕ್ತ ಹಾಗೂ ನ್ಯಾಯಸಮ್ಮತ ಆಯ್ಕೆಗೆ ಯಾವ ನಿರ್ಬಂಧಗಳೂ ಇರಬಾರದು. ಮತದಾನ ಯಂತ್ರಗಳಲ್ಲಿ ನೋಟಾ ಆಯ್ಕೆಯ ಗುಂಡಿಯನ್ನು ಅಳವಡಿಸುವುದರಿಂದ, ಪ್ರಸಕ್ತ ರಾಜಕೀಯ ವ್ಯವಸ್ಥೆಯಲ್ಲಿ ಪರಿಣಾಮಕಾರಿ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಇದು ಹೆಚ್ಚಿಸುತ್ತದೆ. ಇದರಿಂದ ಮತದಾರರನ್ನು ಸಬಲೀಕರಿಸಿದಂತಾಗುತ್ತದೆ.

**ಕೋರ್ಟ್ ತೀರ್ಪಿನ ಮಹತ್ವ**

ಸಂಸದೀಯ ಪ್ರಜಾಪ್ರಭುತ್ವದಲ್ಲಿ, ಜನರ ಇಚ್ಛೆಯ ನೈಜ ಪ್ರತಿಫಲನವಾಗಬೇಕಾದರೆ ಅವರ ಸಕ್ರಿಯ ಪಾಲ್ಗೊಳ್ಳುವಿಕೆ ಅಗತ್ಯ. ಭಾರತ ಇಂದಿಗೂ ಅಭಿವೃದ್ಧಿಶೀಲ ಪ್ರಜಾಪ್ರಭುತ್ವವೇ ಹೊರತು, ಸಂಪೂರ್ಣವಾಗಿ ಅಭಿವೃದ್ಧಿಹೊಂದಿದ ಅಥವಾ ಪ್ರಬುದ್ಧ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲ. ಸುಪ್ರೀಂಕೋರ್ಟ್‌ನ ಈ ಮಹತ್ವದ ತೀರ್ಪು, ದೇಶದ ರಾಜಕೀಯ ವ್ಯವಸ್ಥೆಯನ್ನು ಸ್ವಚ್ಛಗೊಳಿಸುವ ಸುದೀರ್ಘ ಹಾದಿಯಲ್ಲಿ ಮೊದಲ ಹೆಜ್ಜೆ. ಋಣಾತ್ಮಕ ಮತದಾನದ ಅವಕಾಶದಿಂದಾಗಿ, ಚುನಾವಣೆಯಲ್ಲಿ ವ್ಯವಸ್ಥಿತ ಬದಲಾವಣೆಗೆ ಅವಕಾಶವಾಗಲಿದೆ ಮತ್ತು ರಾಜಕೀಯ ಪಕ್ಷಗಳು, ಅನಿವಾರ್ಯವಾಗಿ ಸ್ವಚ್ಛ ಮತ್ತು ಶುದ್ಧ ಚಾರಿತ್ರ್ಯದ ಅಭ್ಯರ್ಥಿಗಳನ್ನು ಮುನ್ನಲೆಗೆ ತರುವುದು ಅನಿವಾರ್ಯವಾಗುತ್ತದೆ.

ಭಾರತದ ಸಂವಿಧಾನದ ಪ್ರಕಾರ ಚುನಾವಣೆಯ ಹಕ್ಕು ಶಾಸನಬದ್ಧ ಹಕ್ಕಾಗಿದ್ದರೆ, ತಿರಸ್ಕರಿಸುವ ಹಕ್ಕು ಮೂಲಭೂತ ಹಕ್ಕು. ಪ್ರಜಾಪ್ರಭುತ್ವ ಎನ್ನುವುದು ಆಯ್ಕೆಯ ವಿಧಾನವಾಗಿದ್ದು, ನಾಗರಿಕರು ಅಭ್ಯರ್ಥಿಗಳನ್ನು ತಿರಸ್ಕರಿಸುವ ಹಕ್ಕಿನ ಮಹತ್ವ ಅಗಾಧವಾದದ್ದು. ಋಣಾತ್ಮಕ ಮತದಾನದ ಪರಿಕಲ್ಪನೆಯಿಂದ, ಕಣದಲ್ಲಿರುವ ಎಲ್ಲ ಅಭ್ಯರ್ಥಿಗಳ ಬಗ್ಗೆಯೂ ಮತದಾರರು ಅತೃಪ್ತಿ ಹೊಂದಿದ್ದರೆ, ಭಾರಿ ಸಂಖ್ಯೆಯಲ್ಲಿ ಮತದಾರರು ಮತಗಟ್ಟೆಗಳಿಗೆ ಬಂದು ತಮ್ಮ ಹಕ್ಕನ್ನು ಚಲಾಯಿಸಿ, ಅನಪೇಕ್ಷಿತ ಅಭ್ಯರ್ಥಿಗಳನ್ನು ರಾಜಕೀಯ ವ್ಯವಸ್ಥೆಯಿಂದ ಹೊರದೂಡಲು ಇದು ಅವಕಾಶ ಮಾಡಿಕೊಡುತ್ತದೆ. ಅಂತಿಮವಾಗಿ, ಸುಪ್ರೀಂಕೋರ್ಟ್ ತೀರ್ಪು, ಈ ದೇಶದ ನಾಗರಿಕರ ಇಚ್ಛೆಗಳನ್ನು ಪ್ರತಿನಿಧಿಸುತ್ತದೆ ಎಂದು ಹೇಳಬಹುದಾಗಿದೆ. ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಲವು ಮತದಾರರಿಗೆ ಈಗ ಇರುವ ವ್ಯವಸ್ಥೆ ಬಗ್ಗೆ ತಿರಸ್ಕಾರ ಇದೆ. ಸದ್ಯಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಬೇಕಾದರೆ, ಹಣ ಮತ್ತು ಪಕ್ಷದ ಹಿರಿಯ ನಾಯಕರ ಜತೆ ಉತ್ತಮ ಬಾಂಧವ್ಯ ಹೊಂದಿರುವುದು ಅನಿವಾರ್ಯವಾಗುತ್ತದೆ. ನೋಟಾ ಆರಂಭಿಸಿರುವ ಹೊಸ ಕ್ರಮದಿಂದ, ಅರ್ಹ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಡಲು ಸಾಧ್ಯವಾಗಲಿದೆ.

**ಹಾಲಿ ಇರುವ ಅವಕಾಶಗಳು**

ಹಾಲಿ ಇರುವ ಪ್ರಜಾ ಪ್ರತಿನಿಧಿ ಕಾಯ್ದೆಯ ಸೆಕ್ಷನ್ 49 (ಒ) ಅನ್ವಯ, ಮತಗಟ್ಟೆಗೆ ಬಂದ ಮತದಾರರು ಯಾವ ಅಭ್ಯರ್ಥಿಗೂ ಮತ ನೀಡಲು ಇಚ್ಛಿಸದಿದ್ದರೆ, ಮತಗಟ್ಟೆಯಲ್ಲಿರುವ ಅಧ್ಯಕ್ಷಾಧಿಕಾರಿಗೆ ತನ್ನ ಇಚ್ಛೆಯನ್ನು ಹೇಳಿಕೊಳ್ಳಬೇಕು ಮತ್ತು ಯಾರಿಗೂ ಮತ ಚಲಾಯಿಸಲು ನಾನು ಬಯಸುವುದಿಲ್ಲ ಎಂದು ಸ್ಪಷ್ಟಪಡಿಸಬೇಕು. ಆಗ ಅಧ್ಯಕ್ಷಾಧಿಕಾರಿ ಇದನ್ನು ಅಧಿಕೃತ ದಾಖಲೆಯಲ್ಲಿ ದಾಖಲಿಸಿಕೊಳ್ಳುತ್ತಾರೆ ಮತ್ತು ಅದಕ್ಕೆ ಮತದಾರರ ಸಹಿಯನ್ನು ಪಡೆಯುತ್ತಾರೆ. ಅಂದರೆ ಮತದಾರರು ಕಣದಲ್ಲಿರುವ ಯಾವ ಅಭ್ಯರ್ಥಿಗೂ ಮತದಾನ ಮಾಡಲು ಬಯಸದಿದ್ದರೆ, ಅರ್ಜಿ ನಮೂನೆ 17 (ಎ) ಯನ್ನು ಭರ್ತಿ ಮಾಡಬೇಕಾಗುತ್ತದೆ. ಅಂದರೆ ಇದು, ಮೇಲ್ಕಂಡ ಯಾರೂ ಅಲ್ಲ ಎಂಬ ಆಯ್ಕೆಗೆ ಸಮಾನವಾದದ್ದು. ಆದರೆ ಸೆಕ್ಷನ್ 49 (ಒ) ಸಂವಿಧಾನಾತ್ಮಕ ಅವಕಾಶವನ್ನು ಉಲ್ಲಂಘಿಸುತ್ತದೆ. ಸಂವಿಧಾನಾತ್ಮಕವಾಗಿ 19 (1) (ಎ) ವಿಧಿ ಅನ್ವಯ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎಲ್ಲ ನಾಗರಿಕರಿಗೆ ನೀಡಲಾಗಿದೆ ಮತ್ತು ಸೆಕ್ಷನ್ 21ರ ಅನ್ವಯ ವಿಮೋಚನೆಯ ಹಕ್ಕನ್ನು ನೀಡಲಾಗಿದೆ. ಇವೆರಡಲ್ಲೂ ಉಲ್ಲಂಘಿಸುವ ಜತೆಗೆ ರಹಸ್ಯ ಮತದಾನದ ಪರಿಕಲ್ಪನೆಗೂ ಇದು ವ್ಯತಿರಿಕ್ತವಾಗಿದೆ. ಸೆಕ್ಷನ್ 49 (ಒ) ಬಗೆಗಿನ ಜಾಗೃತಿ ತೀರಾ ಕಡಿಮೆ ಇತ್ತು ಮತ್ತು 17 (ಎ) ಅರ್ಜಿ ನಮೂನೆ ಅಪೇಕ್ಷಿತರಿಗೆ ತಲುಪುತ್ತದೆ ಎನ್ನುವ ಯಾವ ಖಾತ್ರಿಯೂ ಇರಲಿಲ್ಲ.

**ಮತಪತ್ರದಲ್ಲಿ ನೋಟಾ**

ಇದನ್ನು ನಿರಾಕರಣೆ ಮತ ಎಂದೂ ಕರೆಯಲಾಗುತ್ತದೆ. ಕೆಲ ವ್ಯಾಪ್ತಿಯಲ್ಲಿ ಮತ್ತು ಸಂಘ ಸಂಸ್ಥೆಗಳಲ್ಲಿ ಈಗಾಗಲೇ ಇದು ಜಾರಿಯಲ್ಲಿದೆ. ಒಂದು ಮತದಾನ ವ್ಯವಸ್ಥೆಯಲ್ಲಿ ಕಣದಲ್ಲಿರುವ ಎಲ್ಲ ಅಭ್ಯರ್ಥಿಗಳ ಬಗ್ಗೆ ಮತದಾರರಿಗೆ ತೃಪ್ತಿ ಇಲ್ಲದಿದ್ದರೆ, ಅದನ್ನು ಅಭಿವ್ಯಕ್ತಗೊಳಿಸಲು ಈ ವ್ಯವಸ್ಥೆ ಅನುವು ಮಾಡಿಕೊಡುತ್ತದೆ. ಅಂದರೆ ಇದು ಚುನಾವಣೆಯಲ್ಲಿ ತಮ್ಮ ಸಮ್ಮತಿಯನ್ನು ಅಥವಾ ಅಸಮ್ಮತಿಯನ್ನು ಅಭಿವ್ಯಕ್ತಗೊಳಿಸುವ ಅವಕಾಶ. ಇದರಲ್ಲಿ ಸಾಮಾನ್ಯವಾಗಿ ಮೇಲ್ಕಂಡ ಯಾರೂ ಅಲ್ಲ ಎಂಬ ಎರಡು ಆಯ್ಕೆಗಳಿವೆ. ಅಂದರೆ ಹೊಸ ಚುನಾವಣೆಗೆ ಆದೇಶ ನಿಡಬೇಕು ಅಥವಾ ಈ ಹುದ್ದೆಯನ್ನು ಖಾಲಿ ಇಡಬೇಕು. ಈ ಎರಡೂ ಅವಕಾಶದಲ್ಲಿ ಒಂದು ಚುನಾವಣೆಯಲ್ಲಿ ನೋಟಾ ಗೆದ್ದರೆ, ಅದು ಕೇವಲ ಸಾಂಕೇತಿಕವಾಗುತ್ತದೆ. ಇದು ಎಲ್ಲ ರಾಜಕೀಯ ಪಕ್ಷಗಳಿಗೆ ಮತ್ತು ಸೋತ ಅಭ್ಯರ್ಥಿಗಳಿಗೆ ಪ್ರಬಲ ಸಂದೇಶವನ್ನು ರವಾನಿಸುವ ವಿಧಾನವಾಗುತ್ತದೆ. ನೀವು ಒಳ್ಳೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಇಲ್ಲದಿದ್ದರೆ, ನೋಟಾ ಅಭ್ಯರ್ಥಿಯ ಎದುರು ಸೋಲಬೇಕಾಗುತ್ತದೆ ಎಂಬ ಸಂದೇಶ ರವಾನೆಯಾಗುತ್ತದೆ.

**ಸಂಭಾವ್ಯ ಪರಿಣಾಮ:**


www.shikarat.com

ಭಾರತದ ಪ್ರಸ್ತುತ ಸನ್ನಿವೇಶದಲ್ಲಿ ನೋಟಾ ಹೆಚ್ಚಿನ ಬಹುಮತ ಪಡೆಯುವ ಅಥವಾ ಗೆಲುವು ಸಾಧಿಸುವ ಎಲ್ಲ ಸಾಧ್ಯತೆಗಳೂ ಇವೆ. ಇಂಥ ಪ್ರಕರಣದಲ್ಲಿ, ವೈವಿಧ್ಯಮಯ ಪ್ರಕ್ರಿಯೆಗಳು ಅಗತ್ಯವಾಗುತ್ತವೆ. ಇದರಲ್ಲಿ ಆ ಹುದ್ದೆಯನ್ನು ಖಾಲಿ ಇಡುವುದು, ಅಂಥ ಹುದ್ದೆಗಳಿಗೆ ನಾಮಕರಣ ಮಾಡುವುದು, ಹೊಸದಾಗಿ ನಾಮಪತ್ರ ಸಲ್ಲಿಸಲು ಅವಕಾಶ ಮಾಡಿಕೊಡುವುದು ಅಥವಾ ಹೊಸ ಚುನಾವಣೆಗಳನ್ನು ನಡೆಸುವುದು ಇಲ್ಲವೇ ಅದನ್ನು ಗಂಭೀರವಾಗಿ ಪರಿಗಣಿಸದಿರುವುದು.

ಮತದಾರರಿಗೆ ನೋಟಾ ಆಯ್ಕೆ ಬೇಕು; ಏಕೆಂದರೆ

1. ನಾಗರಿಕರಿಗೆ ನೋಟಾ ಅವಕಾಶ ನೀಡಿದಲ್ಲಿ, ಕಣದಲ್ಲಿರುವ ಅಭ್ಯರ್ಥಿಗಳು ನಮ್ಮನ್ನು ಆಳಲು ಯೋಗ್ಯರಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ರವಾನಿಸಲು ಸಾಧ್ಯವಾಗುತ್ತದೆ.

2. ಇದು ಜನತೆ ತಮ್ಮ ಆಯ್ಕೆಯಲ್ಲಿ ಉತ್ತಮ ಅಭ್ಯರ್ಥಿಗಳನ್ನು ಅಂದರೆ ಮತದಾರರ ಭವಿಷ್ಯವನ್ನು ಅರ್ಥ ಮಾಡಿಕೊಂಡು ಅದಕ್ಕೆ ಅನುಗುಣವಾಗಿ ಕಾರ್ಯಯೋಜನೆಗಳನ್ನು ಕೈಗೊಳ್ಳಲು ಸಮರ್ಥ ಅಭ್ಯರ್ಥಿಗಳ ಶೋಧಕ್ಕೆ ಅನುವು ಮಾಡಿಕೊಡುತ್ತದೆ.

3. ನೋಟಾ ಆಯ್ಕೆಯು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಪಾವಿತ್ರ್ಯವನ್ನು ಹೆಚ್ಚಿಸುತ್ತದೆ.

4. ಬಹು ಆಯ್ಕೆಯಲ್ಲಿ, ಮತದಾರರು ನೋಟಾವನ್ನು ಕೂಡಾ ಒಬ್ಬ ಅಭ್ಯರ್ಥಿ ಎಂದು ಪರಿಗಣಿಸಿ ಮತ ಚಲಾಯಿಸಲು ಹಕ್ಕು ಇರುತ್ತದೆ. ಯಾರು ಕೂಡಾ ಅರ್ಹ ಅಭ್ಯರ್ಥಿಗಳಿಲ್ಲ ಎಂದು ಮತದಾರರು ನಿರ್ಧರಿಸಿದರೆ ನೋಟಾ ಗೆಲ್ಲುತ್ತದೆ. ಇಲ್ಲದಿದ್ದರೆ ಇಬ್ಬರು ಕೆಟ್ಟ ಅಭ್ಯರ್ಥಿಗಳ ಪೈಕಿ ಕಡಿಮೆ ಕೆಟ್ಟ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ಅನಿವಾರ್ಯವಾಗುತ್ತದೆ. ಅಥವಾ ಹಳೆ ಅಭ್ಯರ್ಥಿಯನ್ನು ಪುನರ್ ಆಯ್ಕೆ ಮಾಡುವುದು ಅನಿವಾರ್ಯ ಎನಿಸಿಬಿಡುತ್ತದೆ.

5. ಮೇಲ್ಕಂಡ ಯಾರೂ ಅಲ್ಲ ಎಂಬ ಆಯ್ಕೆಯು ಮೇಲ್ಕಂಡ ಎಲ್ಲರೂ ಎಂಬ ಆಯ್ಕೆಗೆ ವಿವೇಚನಾಯುಕ್ತ ಪರ್ಯಾಯ.

6. ನೋಟಾ ಸೇರ್ಪಡೆಯೊಂದಿಗೆ, ಮತದಾರರು ತಮ್ಮ ಅಭಿಪ್ರಾಯಕ್ಕೆ ಧ್ವನಿ ನೀಡಲು ಸಾಧ್ಯವಾಗುತ್ತದೆ. ಅಂದರೆ ಮತದಾರರು ನಾನು ಯಾವ ಅಭ್ಯರ್ಥಿಯನ್ನೂ ಬೆಂಬಲಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಲು ಸಹಕಾರಿಯಾಗುತ್ತದೆ. ಆದರೆ ಅದರ ನಡುವೆಯೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾನು ಪ್ರಜ್ಞಾಪೂರ್ವಕವಾಗಿ ಪಾಲ್ಗೊಂಡಿದ್ದೇನೆ ಎಂಬ ಸಮಾಧಾನ ಮತದಾರರಿಗೆ ಇರುತ್ತದೆ.

7. ಇಂಥ ಋಣಾತ್ಮಕ ಮತದಾನದ ಪರಿಕಲ್ಪನೆ ವಿಶ್ವಾದ್ಯಂತ 13 ದೇಶಗಳಲ್ಲಿ ಜಾರಿಯಲ್ಲಿದೆ. ಇದು ರಾಜಕೀಯ ಕ್ಷೇತ್ರದಲ್ಲಿ ಜನತೆಯ ಪ್ರಜ್ಞಾಪೂರ್ವಕ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಡುತ್ತದೆ. ಜತೆಗೆ ಮತದಾನ ಪ್ರಕ್ರಿಯೆಯಲ್ಲಿ ಪರಿಶುದ್ಧತೆಯನ್ನು ಪ್ರತಿಪಾದಿಸಲು ಇದು ಸಹಕಾರಿಯಾಗುತ್ತದೆ. ಇದು ಒಂದು ಪ್ರಬುದ್ಧ ಪ್ರಜಾಪ್ರಭುತ್ವ ವ್ಯವಸ್ಥೆಯ ದ್ಯೋತಕ ಎನಿಸಿಕೊಳ್ಳುತ್ತದೆ. ಭಾರತ ಈ ನಿಟ್ಟಿನಲ್ಲಿ ವಿಶ್ವದಲ್ಲಿ ಪ್ರಬುದ್ಧತೆ ಮೆರೆವ ಮತದಾರರನ್ನು ಹೊಂದಿರುವ ಕೆಲವೇ ದೇಶಗಳ ಗುಂಪಿಗೆ ಸೇರಿದಂತಾಗಿದೆ. ಈಗಾಗಲೇ ಫ್ರಾನ್ಸ್, ಬ್ರೆಜಿಲ್, ಫಿನ್‌ಲ್ಯಾಂಡ್ ಮತ್ತು ಅಮೆರಿಕದಲ್ಲಿ ಈ ವ್ಯವಸ್ಥೆ ಜಾರಿಯಲ್ಲಿದೆ. ಇತರ ಕೆಲ ದೇಶಗಳಾದ ಬೆಲ್ಜಿಯಂ, ಗ್ರೀಸ್, ಉಕ್ರೇನ್, ಚಿಲಿ, ಬಾಂಗ್ಲಾದೇಶ, ಸ್ವೀಡನ್, ಕಾಂಬೋಡಿಯಾ ಮತ್ತು ಸ್ಪೇನ್‌ನಲ್ಲಿ ಕೂಡಾ ನಿರಾಕರಣೆ ಮತದಾನದ ಅವಕಾಶವಿದೆ.

8. ಪ್ರಜಾಪ್ರಭುತ್ವದ ಉಳಿವಿಗಾಗಿ, ಪ್ರಜೆಗಳ ಪ್ರತಿನಿಧಿಯಾಗಿ ಕಣದಲ್ಲಿರುವ ವ್ಯಕ್ತಿಗಳ ಪೈಕಿ ಉತ್ತಮರಾದವರನ್ನು ಆಯ್ಕೆ ಮಾಡುವುದು ಅಗತ್ಯ. ಇದರಿಂದ ದೇಶದಲ್ಲಿ ಉತ್ತಮ ಆಡಳಿತವನ್ನು ನಿರೀಕ್ಷಿಸಬಹುದು. ಇದು ಸಾಧ್ಯವಾಗುವುದು ಉತ್ತಮ ನೈತಿಕ ಹಿನ್ನೆಲೆಯ ವ್ಯಕ್ತಿಗಳನ್ನು ಶಾಸನಸಭೆಗಳಿಗೆ ಆಯ್ಕೆ ಮಾಡಿ ಕಳುಹಿಸಿದಾಗ ಮಾತ್ರ. ಅಂದರೆ ಧನಾತ್ಮಕ ಮತಗಳ ಮೂಲಕ ಗೆಲುವು ಸಾಧಿಸುವ ಅಭ್ಯರ್ಥಿ ಇದರಲ್ಲಿ ಅರ್ಹ ಎನಿಸಿಕೊಳ್ಳುತ್ತಾರೆ.

9. ನೋಟಾ ಎನ್ನುವುದು ತಡೆಗೆ ಸಮಾನವಾದದ್ದು ಮತ್ತು ವಾಪಾಸು ಕರೆಸಿಕೊಳ್ಳುವ ಅಧಿಕಾರ ಚಿಕಿತ್ಸೆಗೆ ಸಮಾನ. ಆದ್ದರಿಂದ ಚಿಕಿತ್ಸೆಗಿಂತ ತಡೆಯೇ ಹೆಚ್ಚು ಪರಿಣಾಮಕಾರಿ ವಿಧಾನ.

ನೋಟಾ ಆಯ್ಕೆ ಅವಕಾಶ ನೀಡಬಾರದು

1. ಇದು ಇಡೀ ಚುನಾವಣಾ ಪ್ರಕ್ರಿಯೆಯನ್ನು ವ್ಯರ್ಥವಾಗಿಸುತ್ತದೆ.

2. ಒಂದು ಚುನಾವಣೆ ನಡೆಯುವುದು ಪ್ರತಿನಿಧಿಯನ್ನು ಆಯ್ಕೆ ಮಾಡಲು. ಆದರೆ ಮೇಲ್ಕಂಡ ಯಾರೂ ಅಲ್ಲ ಎನ್ನುವ ಆಯ್ಕೆಯನ್ನು ಜನತೆಗೆ ನೀಡಿದರೆ, ಅದನ್ನೇ ಆಯ್ಕೆ ಮಾಡಿ, ಜನರು ತಮ್ಮ ಆಯ್ಕೆಯನ್ನೇ ಸಮರ್ಥಿಸಿಕೊಂಡಂತಾಗುತ್ತದೆ.

3. ಒಬ್ಬ ಮತದಾರನಿಗೆ ಯಾರ ಬಗ್ಗೆಯೂ ಒಲವು ಇಲ್ಲದಿದ್ದರೆ, ಅಂಥವರು ಮತ ಚಲಾಯಿಸುವ ಅಗತ್ಯವಿಲ್ಲ. ಅದಕ್ಕಾಗಿ ಮತಪತ್ರವನ್ನು ಭರ್ತಿ ಮಾಡುವ ಅಗತ್ಯವಿಲ್ಲ.



www.shikarat.com

4. ಸಿಪಿಐ(ಎಂ) ಪಕ್ಷದ ಅಭಿಪ್ರಾಯದಂತೆ, ಇದು ಚುನಾವಣಾ ಸುಧಾರಣಾ ಪ್ರಕ್ರಿಯೆಯ ಒಂದು ಸಣ್ಣ ಅಂಶ. ಆದ್ದರಿಂದ ನ್ಯಾಯಾಂಗ ಇದನ್ನು ಪ್ರತ್ಯೇಕವಾಗಿ ಪರಿಗಣಿಸುವ ಬದಲು ಇಡೀ ಚುನಾವಣಾ ಪ್ರಕ್ರಿಯೆ ಸುಧಾರಣೆಯ ಒಂದು ಭಾಗವಾಗಿ ಪರಿಗಣಿಸಬೇಕು. ಅವರ ಬಲಕ್ಕೆ ಅನುಗುಣವಾಗಿ ಪ್ರಾತಿನಿಧ್ಯ, ಹಣ ಮತ್ತು ತೋಳ್ಬಲವನ್ನು ನಿಯಂತ್ರಿಸಲು ತುರ್ತು ಕ್ರಮಗಳನ್ನು ಸಂಸತ್ತು ಚರ್ಚಿಸಿ ಅದನ್ನು ಜಾರಿಗೆ ತರಬೇಕು.

5. ಮತಯಂತ್ರಗಳಲ್ಲಿ ಮೇಲ್ಕಂಡ ಯಾರೂ ಅಲ್ಲ ಎಂಬ ಆಯ್ಕೆಯನ್ನು ನೀಡುವುದಕ್ಕೆ ಯಾವ ಮತದಾನ ಮೌಲ್ಯವೂ ಇಲ್ಲ. ನೋಟಾ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡರೂ, ಉಳಿದ ಮತಗಳಲ್ಲಿ ಅತಿಹೆಚ್ಚು ಮತವನ್ನು ಗಳಿಸಿದ ಅಭ್ಯರ್ಥಿಯನ್ನು ವಿಜೇತ ಅಭ್ಯರ್ಥಿ ಎಂದು ಘೋಷಿಸಲಾಗುತ್ತದೆ. ಆದ್ದರಿಂದ ಇದರಿಂದ ಯಾವ ಪರಿಣಾಮಕಾರಿ ಅಥವಾ ಧನಾತ್ಮಕ ಪರಿಣಾಮವೂ ಸಾಧ್ಯವಿಲ್ಲ.

ಸುಪ್ರೀಂಕೋರ್ಟಿನ ಈ ಐತಿಹಾಸಿಕ ತೀರ್ಪು ಖಂಡಿತಾ ಸ್ವಾಗತಾರ್ಹ ಬೆಳವಣಿಗೆ. ಇದು ಖಂಡಿತವಾಗಿಯೂ ನಮ್ಮ ವ್ಯವಸ್ಥೆ ಬಲಗೊಳ್ಳಲು ಕಾರಣವಾಗುತ್ತದೆ. ಇದೀಗ ನಮ್ಮ ಶಾಸನಬದ್ಧ ಸಂಸ್ಥೆಗಳು ಅವುಗಳ ಮೇಲಿನ ನಂಬಿಕೆಯನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕು. ಇದು ರಾಜಕೀಯ ಭ್ರಷ್ಟಾಚಾರವನ್ನು ಬುಡಸಮೇತ ಕಿತ್ತೊಗೆಯಲು ಮತ್ತು ಇದರ ವಿರುದ್ಧ ಜನಜಾಗೃತಿಗೆ ಇದು ಮಹತ್ವದ ಹೆಜ್ಜೆಯಾಗಲಿದೆ. ಇದನ್ನು ಸಾಧಿಸಲು ಕೇವಲ ಮೌಲ್ಯಾಧರಿತ ಶಿಕ್ಷಣ ವ್ಯವಸ್ಥೆಯಿಂದಷ್ಟೇ ಸಾಧ್ಯ. ಆಗ ಮಾತ್ರ ನಾಗರಿಕರಲ್ಲಿ ಒಂದು ಜವಾಬ್ದಾರಿ ಮತ್ತು ಕರ್ತವ್ಯ ಪ್ರಜ್ಞೆಯನ್ನು ಮೂಡಿಸುವುದು ಸಾಧ್ಯವಾಗಲಿದೆ. ಇದು ಸಾಧ್ಯವಾಗುವುದು, ಇಡೀ ರಾಜಕೀಯ ವ್ಯವಸ್ಥೆ ತಾನಾಗಿಯೇ ಬದಲಾವಣೆಯಾದಾಗ ಮಾತ್ರ. ಅಲ್ಲದೇ ಪ್ರತಿಯೊಬ್ಬ ಮತದಾರ ಕೂಡಾ ಸುಶಿಕ್ಷಿತರಾಗಿ, ಅವರ ಹಕ್ಕು ಮತ್ತು ಕರ್ತವ್ಯಗಳನ್ನು ಸಮರ್ಪಕವಾಗಿ ತಿಳಿದುಕೊಂಡಾಗ ಮಾತ್ರ ಇದು ಸಾಧ್ಯವಾಗುತ್ತದೆ. ಒಬ್ಬರಿಗೆ ಇರುವ ವೈಯಕ್ತಿಕ ಬದ್ಧತೆ ಅಥವಾ ಹೊಣೆಗಾರಿಕೆಯನ್ನು ಪೂರ್ಣಗೊಳಿಸಬೇಕಾದರೆ ಆತ ರಾಷ್ಟ್ರೀಯ ನೀತಿ ನಿರೂಪಣೆಯ ಬಗ್ಗೆ ಸೂಕ್ಷ್ಮತೆಯನ್ನು ಹೊಂದಿರಬೇಕಾಗುತ್ತದೆ.

### 31. ಬೌದ್ಧಿಕ ಆಸ್ತಿಹಕ್ಕು

ಅಬೋಟ್ ಕಂಪನಿಯ ಮಾರುಕಟ್ಟೆ ಪ್ರಗತಿ 2005ರಿಂದ 2012ರ ಅವಧಿಯಲ್ಲಿ ಶೇಕಡ 183ರಷ್ಟು ಹೆಚ್ಚಿದೆ. ಆಂತರಿಕ ಔಷಧ ಮಾರುಕಟ್ಟೆಯಲ್ಲಿ ಅದು ಶೇಕಡ 2.3 ಪಾಲು ಹೊಂದಿದ್ದ ಅದು ಈ ಅವಧಿಯಲ್ಲಿ ಶೇಕಡ 7ರಷ್ಟು ಪಾಲನ್ನು ಹೆಚ್ಚಿಸಿಕೊಂಡಿದೆ. ಪಿಬಿಝರ್ ಮತ್ತು ವ್ಯಥ್‌ಬಿಎಸ್ಸಿಯ ಒಟ್ಟು ಮಾರುಕಟ್ಟೆ ಪಾಲು 2.5 ಶೇಕಡದಿಂದ ಕ್ರಮವಾಗಿ 3.1 ಮತ್ತು 3.2 ಶೇಕಡಕ್ಕೆ ಹೆಚಿದೆ. ಎಂಎಸ್‌ಡಿ ಮತ್ತು ಘುಲ್‌ಘೋರ್ಡ್ ಮಾರುಕಟ್ಟೆ ಪಾಲು ಶೇಕಡ 0.42ರಿಂದ 1.10ಕ್ಕೆ ಹೆಚ್ಚಿದೆ. ಐಪಿಎ ಪ್ರಕಾರ, ಅಮೆರಿಕ ಹೇಳುವಂತೆ, ಭಾರತದ ಪೇಟೆಂಟ್ ಕಾಯ್ದೆಯ ಸೆಕ್ಷನ್ 3 (ಡಿ) ಟ್ರಿಪ್ಸ್ ಒಪ್ಪಂದದ ಉಲ್ಲಂಘನೆಯಾಗಿದ್ದರೆ, ವ್ಯಾಜ್ಯ ಪರಿಹಾರ ವ್ಯವಸ್ಥೆಯಲ್ಲಿ ಅದನ್ನು ಪ್ರಶ್ನಿಸಬಹುದಾಗಿದೆ. ವಾಸ್ತವವಾಗಿ ಭಾರತದ ಪೇಟೆಂಟ್ ಕಾಯ್ದೆಯಲ್ಲಿ 2005ರಿಂದಲೂ ಯಾವ ಬದಲಾವಣೆಯೂ ಆಗಿಲ್ಲ ಮತ್ತು ಇದು ಟ್ರಿಪ್ಸ್ ಒಪ್ಪಂದದ ಅಗತ್ಯತೆಗಳಿಗೆ ಅನುಗುಣವಾಗಿದೆ.

ಭಾರತದ ಪೇಟೆಂಟ್ ಕಾಯ್ದೆಯು ತಾರತಮ್ಯದಿಂದ ಕೂಡಿದೆ ಎಂಬ ಅಮೆರಿಕದ ವಾದವನ್ನು ಭಾರತದ ಫಾರ್ಮಸ್ಯೂಟಿಕಲ್ ಅಲೈನ್ಸ್ (ಐಪಿಎ) ವಿಶ್ವ ವ್ಯಾಪಾರ ಸಂಸ್ಥೆಯ ವ್ಯಾಜ್ಯ ಪರಿಹಾರ ವ್ಯವಸ್ಥೆಯಲ್ಲಿ ಪ್ರಶ್ನಿಸಿದೆ. ವಾಸ್ತವವಾಗಿ ಭಾರತದಲ್ಲಿ 2005ರಿಂದೀಚೆಗೆ ಹಲವಾರು ಅಮೆರಿಕ ಮೂಲದ ಔಷಧ ಕಂಪನಿಗಳು ಆದಾಯವನ್ನು ಹೆಚ್ಚಿಸಿಕೊಂಡಿವೆ ಮತ್ತು ಮಾರುಕಟ್ಟೆಯಲ್ಲೂ ಮುನ್ನಡೆ ಸಾಧಿಸಿವೆ. ವಿಶ್ವ ವ್ಯಾಪಾರ ಸಂಸ್ಥೆಯ ಬೌದ್ಧಿಕ ಆಸ್ತಿ ಹಕ್ಕು ಒಪ್ಪಂದದ ಅನ್ವಯ ಭಾರತದ ಪೇಟೆಂಟ್ ಕಾಯ್ದೆಗೆ ತಿದ್ದುಪಡಿಯನ್ನು 2005ರಲ್ಲಿ ತರಲಾಗಿತ್ತು. ಅಬೋಟ್ ಕಂಪನಿಯ ಮಾರುಕಟ್ಟೆ ಪ್ರಗತಿ 2005ರಿಂದ 2012ರ ಅವಧಿಯಲ್ಲಿ ಶೇಕಡ 183ರಷ್ಟು ಹೆಚ್ಚಿದೆ. ಆಂತರಿಕ ಔಷಧ ಮಾರುಕಟ್ಟೆಯಲ್ಲಿ ಅದು ಶೇಕಡ 2.3 ಪಾಲು ಹೊಂದಿದ್ದ ಅದು ಈ ಅವಧಿಯಲ್ಲಿ ಶೇಕಡ 7ರಷ್ಟು ಪಾಲನ್ನು ಹೆಚ್ಚಿಸಿಕೊಂಡಿದೆ. ಪಿಬಿಝರ್ ಮತ್ತು ವ್ಯಥ್‌ಬಿಎಸ್ಸಿಯ ಒಟ್ಟು ಮಾರುಕಟ್ಟೆ ಪಾಲು 2.5 ಶೇಕಡದಿಂದ ಕ್ರಮವಾಗಿ 3.1 ಮತ್ತು 3.2 ಶೇಕಡಕ್ಕೆ ಹೆಚಿದೆ. ಎಂಎಸ್‌ಡಿ ಮತ್ತು ಘುಲ್‌ಘೋರ್ಡ್ ಮಾರುಕಟ್ಟೆ ಪಾಲು ಶೇಕಡ 0.42ರಿಂದ 1.10ಕ್ಕೆ ಹೆಚ್ಚಿದೆ. ಐಪಿಎ ಪ್ರಕಾರ, ಅಮೆರಿಕ ಹೇಳುವಂತೆ, ಭಾರತದ ಪೇಟೆಂಟ್ ಕಾಯ್ದೆಯ ಸೆಕ್ಷನ್ 3 (ಡಿ) ಟ್ರಿಪ್ಸ್ ಒಪ್ಪಂದದ ಉಲ್ಲಂಘನೆಯಾಗಿದ್ದರೆ, ವ್ಯಾಜ್ಯ ಪರಿಹಾರ ವ್ಯವಸ್ಥೆಯಲ್ಲಿ ಅದನ್ನು ಪ್ರಶ್ನಿಸಬಹುದಾಗಿದೆ. ವಾಸ್ತವವಾಗಿ ಭಾರತದ ಪೇಟೆಂಟ್ ಕಾಯ್ದೆಯಲ್ಲಿ 2005ರಿಂದಲೂ ಯಾವ ಬದಲಾವಣೆಯೂ ಆಗಿಲ್ಲ ಮತ್ತು ಇದು ಟ್ರಿಪ್ಸ್ ಒಪ್ಪಂದದ ಅಗತ್ಯತೆಗಳಿಗೆ ಅನುಗುಣವಾಗಿದೆ. ಯಾವುದೇ ಹೊಸ ಅನುಶೋಧನೆಗಳಿಗೆ ಪೇಟೆಂಟ್ ಪಡೆಯಲು ಕಾಯ್ದೆಯಲ್ಲಿ ಅವಕಾಶವಿದೆ. ಆ ಮೂಲಕ 20 ವರ್ಷಗಳ ಕಾಲ ಆ ಉತ್ಪನ್ನವನ್ನು ತಯಾರಿಸಲು ಮತ್ತು ಅವುಗಳ ವಿತರಣೆಗೆ ಅವಕಾಶವಿದೆ. ಭಾರತೀಯ ಪೇಟೆಂಟ್ ಕಾಯ್ದೆಯು ತೀರಾ ನಿರ್ದಿಷ್ಟ ಮತ್ತು ಸಮಗ್ರ ಕಾಯ್ದೆಯಾಗಿದ್ದು ಮತ್ತು ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ. ಪೇಟೆಂಟ್ ನೀಡುವ ವಿಧಾನ ಕೂಡಾ ಅತ್ಯಂತ ಕಾನೂನುಬದ್ಧ ಮತ್ತು ಪಾರದರ್ಶಕ ಕ್ರಮವಾಗಿದ್ದು, ಇಡೀ ಪ್ರಕ್ರಿಯೆ ಮತ್ತು ನಿರ್ಧಾರ ಕಾನೂನಾತ್ಮಕ ವಿಮರ್ಶೆಗೆ ಬದ್ಧವಾಗಿರುತ್ತದೆ.

ಭಾರತದ ಪೇಟೆಂಟ್ ಕಾಯ್ದೆಯ ಸೆಕ್ಷನ್ 3(ಡಿ)ಗೆ ಅಮೆರಿಕ ಆಕ್ಷೇಪ ಎತ್ತಿದೆ ಎನ್ನುವುದು ಗಮನಾರ್ಹ ಅಂಶ. ಈ ಸೆಕ್ಷನ್ ಅನ್ವಯ ಈಗಾಗಲೇ ಇರುವ ಔಷಧಿಗಳಿಗೆ ಪೇಟೆಂಟ್ ನೀಡಬೇಕಾದರೆ, ಹಾಲಿ ಇರುವ ಉತ್ಪಾದನಾ ವಿಧಾನದಲ್ಲಿ ಗಣನೀಯ ಸುಧಾರಣೆಯನ್ನು ತಂದಿರಬೇಕು. ಅಮೆರಿಕ ವ್ಯಾಪಾರ ಪ್ರತಿನಿಧಿಗಳ 2013ರ ವಿಶೇಷ ವರದಿಯಲ್ಲಿ ಕೂಡಾ ಈ ಅಂಶವನ್ನು ಉಲ್ಲೇಖಿಸಲಾಗಿದ್ದು, "ಭಾರತ ತೆಗೆದುಕೊಂಡಿರುವ ಕ್ರಮ, ಕಡ್ಡಾಯ ಲೈಸನ್ಸಿಂಗ್ ಪಡೆಯುವಂತಿದೆ. ಇದರಿಂದ ತೊಂದರೆ ನೀಡುವ ಸಂಪ್ರದಾಯಕ್ಕೆ ನಾಂದಿಯಾಗಿದೆ" ಅಲ್ಲದೇ ಇದು ಭಾರತದಲ್ಲಿ ಅನುಶೋಧನೆ ವಾತಾವರಣದ ಬಗ್ಗೆ ಗಂಭೀರ ಪ್ರಶ್ನೆಗಳು ಉದ್ಭವಿಸಲು ಕಾರಣವಾಗಿದೆ" ಈಗಾಗಲೇ ಪೇಟೆಂಟ್


www.shikarat.com